ಗರಿಷ್ಠ 37°c | ಕನಿಷ್ಠ 25°c

ಸುದ್ದಿ ಸಿಂಚನ

ಕನಸಿಗೆ ಜೀವ ತುಂಬುವುದೇ ಬೇಸಿಗೆ ಶಿಬಿರ ಉದ್ದೇಶ: ಎನ್.ಗುರುಪ್ರಸಾದ್



ದಾವಣಗೆರೆ: ಬೇಸಿಗೆ ಎಂದರೆ ಬರೀ ರಜೆ ಅಲ್ಲ, ಅದು ಹೊಸ ವಿಷಯ ಕಲಿಸುವ, ಹೊಸ ಸ್ನೇಹಿತರನ್ನು ಪರಿಚಯಿಸುವ, ಮಕ್ಕಳ ಪ್ರತಿಭೆಗಳನ್ನು ಅನಾವರಣಗೊಳಿಸುವ ಅಮೂಲ್ಯ ಅವಕಾಶವಾಗಿದೆ. ಈ ಶಿಬಿರದಲ್ಲಿ ಮಕ್ಕಳ ಕನಸುಗಳಿಗೆ ಜೀವ ತುಂಬುವುದೇ ಬೇಸಿಗೆ ಶಿಬಿರದ ಉದ್ದೇಶವಾಗಿದೆ ಎಂದು ಮಹಿಳಾ ಮತ್ತು ಕಲ್ಯಾಣ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಎನ್. ಗುರುಪ್ರಸಾದ್ ಹೇಳಿದರು. ಜಿಲ್ಲಾ ಬಾಲಭವನದಲ್ಲಿ ಮಹಿಳಾ ಮತ್ತು ಕಲ್ಯಾಣ ಇಲಾಖೆಯ ಮಂಗಳವಾರ ಆಯೋಜಿಸಿರುವ ಜಿಲ್ಲಾ ಮಟ್ಟದ 15 ದಿನಗಳ ಉಚಿತ ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಪಠ್ಯ ಪುಸ್ತಕ ಹೊರತಾದ ಜೀವನದ ಅನೇಕ ಕೌಶಲ್ಯಗಳನ್ನು ಕಲಿಯುವ ಅವಕಾಶ ಈ ಶಿಬಿರದಲ್ಲಿದೆ. ಶಿಬಿರದಲ್ಲಿ ಪಾಲ್ಗೊಳ್ಳುವ ಮಕ್ಕಳು ಸೃಜನಶೀಲತೆ, ನಾಯಕತ್ವ, ತಂಡದ ಮನೋಭಾವ, ಆತ್ಮವಿಶ್ವಾಸದಂತಹ ಮಹತ್ವದ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ. ಆದ್ದರಿಂದ ಈ ಉಚಿತ ಶಿಬಿರದ ಅವಕಾಶ ಮಕ್ಕಳು ಮತ್ತು ಪೋಷಕರು ಸದುಪಯೋಗ ಮಾಡಿಕೊಳ್ಳಲಿ ಎಂದರು. ದಾವಣಗೆರೆ ಸೈನ್ಸ್ ಫೌಂಡೇಶನ್‌ನ ಕಾರ್ಯಕ್ರಮ ಸಂಯೋಜಕ ಎಂ. ಗುರುಸಿದ್ದಸ್ವಾಮಿ ಮಾತನಾಡಿ, ಪ್ರತಿ ಮಗುವಿನಲ್ಲೂ ವಿಶಿಷ್ಟ ಪ್ರತಿಭೆ ಅಡಗಿದೆ. ಕೆಲವರು ಚಿತ್ರಕಲೆ, ಸಂಗೀತ, ಮತ್ತಿತರರು ನಾಟಕ, ಕ್ರೀಡಾ, ವಿಜ್ಞಾನ ವಿಷಯಗಳಲ್ಲಿ ಆಸಕ್ತಿ ಮತ್ತು ಕುತೂಹಲ ಹೊಂದಿರುತ್ತಾರೆ. ಅಂತಹ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಬೇಸಿಗೆ ಶಿಬಿರದ ಮುಖ್ಯ ಉದ್ದೇಶ ಎಂದು ಹೇಳಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಪೂರ್ಣಿಮಾ ಅಧ್ಯಕ್ಷತೆ ಕಾರ್ಯಕ್ರಮದಲ್ಲಿ ಪರಿವೀಕ್ಷಣಾಧಿಕಾರಿ ಮಾಲತಿ ಹೊಸಗೌಡರು, ಜಿಲ್ಲಾ ಬಾಲಭವನದ ಎಸ್.ಬಿ.ಶಿಲ್ಪ, ಲತಾ, ಸಂಪನ್ಮೂಲ ವ್ಯಕ್ತಿ ಎನ್.ಕೆ.ಲತಾ ಹಾಗೂ ಶಿಬಿರಾರ್ಥಿಗಳು ಇದ್ದರು.

ಬಿಐಇಟಿಯಲ್ಲಿ ಟೆಕ್ಸ್ ಕ್ರಿಯೇಟಿವ್ ರಾಷ್ಟ್ರೀಯ ವಿಚಾರ ಸಂಕಿರಣ



ದಾವಣಗೆರೆ: ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಮತ್ತು ಜವಳಿ ತಂತ್ರಜ್ಞಾನ ವಿಭಾಗದಿಂದ ಇತ್ತೀಚೆಗೆ ರಾಷ್ಟ್ರೀಯ ವಿಚಾರ ಸಂಕಿರಣ ಟೆಕ್ಸ್ ಕ್ರಿಯೇಟಿವ್-2026 ನಡೆಯಿತು. ಕಾರ್ಯಕ್ರಮ ದಲ್ಲಿ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದ ಜವಳಿ ತಂತ್ರಜ್ಞಾನ ಹಾಗೂ ಫ್ಯಾಷನ್ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿತ್ತು. ಜವಳಿ ತಂತ್ರಜ್ಞಾನ ಮತ್ತು ಸಿದ್ದ ಉಡುಪು ತಯಾರಿಕೆಯಲ್ಲಿ ಆಗುತ್ತಿರುವ ಹೊಸ ಹೊಸ ಅವಿಷ್ಕಾರಗಳು ಮತ್ತು ಕೃತಕ ಬುದ್ದಿಮತ್ತೆಯ ಉಪಯೋಗ ಮತ್ತು ಸುಸ್ಥಿರ ಅಭಿವೃದ್ಧಿ ಇವುಗಳನ್ನು ಕುರಿತು ವಿದ್ಯಾರ್ಥಿಗಳು ಪ್ರಬಂಧ ಮಂಡಿಸಿದರು. ವಿಭಾಗದ ಮುಖ್ಯಸ್ಥ ಡಾ.ವೈ. ಎನ್.ದಿನೇಶ್ ಅಧ್ಯಕ್ಷತೆಕಾರ್ಯಕ್ರಮದಲ್ಲಿ ಬೆಂಗಳೂರಿನ ಲಗೂನ ಕಂಪನಿ ಮುಖ್ಯಸ್ಥ ವಿನಾಯಕ ಪೈ, ಶಿವಮೊಗ್ಗದ ಹಿತೇಶ್ ದಾಸ್, ಚೈತನ್ಯ ಕುಮಾರ, ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಬಿ. ಅರವಿಂದ್, ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಜವಳಿ ತಂತ್ರಜ್ಞಾನ ವಿಭಾಗದ ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮಹರಾಷ್ಟ್ರದ ಇಚಲಕಾರಂಜಿಯ ವಿದ್ಯಾರ್ಥಿನಿ ಮೊದಲ ಬಹುಮಾನ, ಹುಲುಕೋಟೆಯ ಆರ್‌ಇಸಿ ಕಾಲೇಜಿನ ವಿದ್ಯಾರ್ಥಿ ಎರಡನೇ ಬಹುಮಾನ, ತಮಿಳುನಾಡಿನ ಕೆಎಸ್‌ಆರ್‌ಕಾಲೇಜು ಹಾಗೂ ದಾವಣಗೆರೆಯ ಬಿಐಇಟಿ ವಿದ್ಯಾರ್ಥಿಗಳು ಮೂರನೇ ಬಹುಮಾನ ಗಳಿಸಿದರು.



ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಭ್ಯರ್ಥಿ ಸಮರ್ಥ ಶಾಮನೂರು ಜಯಶಾಲಿಯಾದ ಕಾರಣ ಮಲೇಬೆನ್ನೂರು ಪಟ್ಟಣದಲ್ಲಿ ಸೋಮವಾರ ಸಂಜೆ ಬ್ಲಾಕ್ ಕಾಂಗ್ರೆಸ್ ಪಕ್ಷದ ಮುಖಂಡರು ಎನ್‌ಎಚ್. ಶ್ರೀನಿವಾಸ್ ನೇತೃತ್ವದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.



112ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕ ದಿನಾಚರಣೆ ಪ್ರಯುಕ್ತ ನ್ಯಾಮತಿ ಪಟ್ಟಣದ ಹಿರಿಯ ಪತ್ರಕರ್ತ, ಕನ್ನಡಪ್ರಭ ವರದಿಗಾರ ಶಿವರುದ್ರಯ್ಯ ಹಿರೇಮಠ್ ಅವರ ಮನೆಗೆ ಕ.ಸಾ.ಪ. ಸದಸ್ಯರಾದ ಬೆಳಗುತ್ತಿ ಜಿ.ಕುಬೇರಪ್ಪ, ಶಿಕ್ಷಕಿ ಸರ್ವಮಂಗಳ ದಂಪತಿ ಭೇಟಿ ನೀಡಿ ಅವರ ಆರೋಗ್ಯ ವಿಚಾರಿಸಿದರು. 58 ವರ್ಷಗಳಿಂದ ಕನ್ನಡಪ್ರಭದಲ್ಲಿ ವರದಿಗಾರರಾಗಿ ಸೇವೆ ಸಲ್ಲಿಸಿದ್ದನ್ನು ಗುರುತಿಸಿ ಕನ್ನಡ ಶಾಲು ಹೊದಿಸಿ ಗೌರವಿಸಿದರು.

ದಕ್ಷಿಣ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆ: ಬಸವರಾಜ

ದಾವಣಗೆರೆ: ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಗೆಲುವು ದಾವಣಗೆರೆ ದಕ್ಷಿಣ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ ಎಂದು



ಮತ್ತೊಮ್ಮೆ ನಿಜವಾಗಿಸಿದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಸಂತಸ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್‌ಅವರ ಸಂಘಟನೆಗೆ ಜನಮನ್ನಣೆ ದೊರಿತಿದೆ. ಚುನಾವಣೆ ಸಂದರ್ಭ ದಾವಣಗೆರೆಗೆ ಆಗಮಿಸಿ ಪ್ರಚಾರ ಮಾಡಿದ ಸಿಎಂ, ಡಿಸಿಎಂ, ಎಐಸಿಸಿಯ ಪ್ರಧಾನ ಕಾರ್ಯದರ್ಶಿ ಸುರ್ಜೆವಾಲಾ, ಕಾರ್ಯದರ್ಶಿ ಅಭಿಷೇಕ್ ದತ್, ಜಿಲ್ಲಾ ಮಂತ್ರಿ ಎಸ್.ಎಸ್. ಮಲ್ಲಿಕಾರ್ಜುನ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಹರ್ಷದ್ ಅವರಿಗೆ ಅಭಿನಂದನೆ ಎಂದು ತಿಳಿಸಿದ್ದಾರೆ.

ದಕ್ಷಿಣ ಸೋಲಿಗೆ ಕಾರ್ಯಕರ್ತರು ಎದೆಗುಂದಬೇಡಿ

ನನ್ನ ಮನೆ ಮುಂದೆ ಕಾಂಗ್ರೆಸ್ ಸಂಭ್ರಮಿಸಿತು | ಸಾಮಾನ್ಯ ಕಾರ್ಯಕರ್ತ ಫೈಟ್ ಕೊಟ್ಟ: ಯಶವಂತ ರಾವ್ ಹೇಳಿಕೆ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆದಕ್ಷಿಣಕ್ಷೇತ್ರದಲ್ಲಿಕೇವಲ5708ಮತಗಳ ಅಂತರದಲ್ಲಿನಾವು ಸೋತಿದ್ದರೂ, ನಮ್ಮ ಯಾವುದೇ ಕಾರ್ಯಕರ್ತರೂ ಎದೆಗುಂದಬೇಕಾಗಿಲ್ಲ. ಇನ್ನು 2 ವರ್ಷಕ್ಕೆ ಸಾರ್ವತ್ರಿಕ ಚುನಾವಣೆಗೆ ನಾವೆಲ್ಲಾ ಸನ್ನದ್ಧರಾಗೋಣ ಎಂದು ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್ ಪಕ್ಷದ ಕಾರ್ಯಕರ್ತರಿಗೆ ಧೈರ್ಯ ತುಂಬಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಕಾರ್ಯಕರ್ತರ ಜೊತೆಗೆ ನಾವು ಸದಾ ಇದ್ದೇ ಇರುತ್ತೇವೆ. ನಮ್ಮ ಹೋರಾಟ ಇಲ್ಲಿಗೆ ನಿಲ್ಲಿಸುವುದಿಲ್ಲ. ಇದು ಹೀಗೆಯೇ ಮುಂದುವರಿಯುತ್ತದೆ. ನಮ್ಮ ಅಭ್ಯರ್ಥಿ ಇಲ್ಲಿ 63 ಸಾವಿರಕ್ಕೂ ಅಧಿಕ ಮತ ಪಡೆದಿದ್ದನ್ನು ನಾವ್ಯಾರೂ ಮರೆಯಬಾರದು ಎಂದರು.

ಕಾಂಗ್ರೆಸ್ ಗೆಲುವಿಗೆ ಸ್ವಾಗತ: ಕಾಂಗ್ರೆಸ್ ಅಭ್ಯರ್ಥಿ ಗೆಲುವಿನ ಹಿನ್ನೆಲೆಯಲ್ಲಿ ಆ ಪಕ್ಷದ ಕೆಲ ಕಾರ್ಯಕರ್ತರು ನನ್ನ ಮನೆಯ ಮುಂದೆ ಪಟಾಕಿ ಸಿಡಿಸಿ, ವಿಜಯೋತ್ಸವ ಆಚರಿಸಿದರು. ಸಚಿವ ಎಸ್. ಎಸ್. ಮಲ್ಲಿಕಾರ್ಜುನ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ, ದಕ್ಷಿಣಕ್ಷೇತ್ರದ ವಿಜೇತ ಅಭ್ಯರ್ಥಿ ಸಮರ್ಥಶಾಮನೂರುಪರಘೋಷಣೆಕೂಗಿದರು. ಕಾಂಗ್ರೆಸ್ಸಿನ ಗೆಲುವನ್ನು ನಾವು ಸ್ವಾಗತಿಸುತ್ತೇವೆ. ಆದರೆ, ನಾವು ಯಾರದ್ದೋ ಸಂಸ್ಥೆ ಹೊಡೆದು, ದುಡ್ಡುಮಾಡಿಲ್ಲ. ಸಾಮಾನ್ಯ ಬಡಕುಟುಂಬದವರು ನಾವು. ಒಬ್ಬಸಾಮಾನ್ಯ ಕಾರ್ಯಕರ್ತರನ್ನುನಿಲ್ಲಿಸಿ, ಚುನಾವಣೆ ಮಾಡಿ ತೋರಿಸಿದ್ದೇವೆ ಎಂದು ಹೇಳಿದರು.



ದಾವಣಗೆರೆಯಲ್ಲಿ ಮಂಗಳವಾರ ಬಿಜೆಪಿ ಹಿರಿಯ ಮುಖಂಡ, ದೂಡಾ ಮಾಜಿ ಅಧ್ಯಕ್ಷ ಯಶವಂತ ರಾವ್ ಜಾಧವ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕಣ್ಣಲ್ಲಿ ನೀರು ಹಾಕಿದ್ದೇನೆ: ಕಾಂಗ್ರೆಸ್ ಕಾರ್ಯಕರ್ತರಿಗೆ ನಾನು ಹೇಳುವುದಿಷ್ಟೇ. ನಾವು ಯಾರದ್ದೇ ಹಿಂಬಾಲಕರಲ್ಲ, ನಾವು ಯಾವುದೇ ಸಂಸ್ಥೆ ಹೊಡೆದುಕೊಂಡವರಲ್ಲ. ಎದುರಾಳಿ ಕಾಂಗ್ರೆಸ್‌ಪಕ್ಷದಅಭ್ಯರ್ಥಿಎಷ್ಟೇಪ್ರಬಲವಾಗಿದ್ದರೂ 63 ಸಾವಿರಕ್ಕೂ ಅಧಿಕಮತಗಳನ್ನು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ. ದಾಸಕರಿಯಪ್ಪ ಪಡೆದಿದ್ದು, ಇಂತಹದ್ದೊಂದುಸಾಧನೆನಮ್ಮೆಲ್ಲಾಕಾರ್ಯಕರ್ತರ ಅವಿರತ ಪರಿಶ್ರಮದಿಂದಾಗಿ ಸಾಧ್ಯವಾಗಿದೆ. ನಮ್ಮ ಕಾರ್ಯಕರ್ತರೇ ನಮ್ಮ ಪಕ್ಷದ ಶಕ್ತಿಯಾಗಿದ್ದು, ಆ ಎಲ್ಲರಿಗೂ ಅಭಿನಂದಿಸುತ್ತೇನೆ. ಈ ಚುನಾವಣೆಯಲ್ಲಿ ಗೆಲುವಿನ ಅಂತರ ಕೇವಲ 5708 ಮತಗಳಷ್ಟೇ ಆಗಿದ್ದು, ಶ್ರೀನಿವಾಸ ದಾಸಕರಿಯಪ್ಪ ಸೋತಾಗ ಕಣ್ಣಲ್ಲಿ ನೀರು ಹಾಕಿದ್ದೇನೆ ಎಂದು ತಿಳಿಸಿದರು.

ಸಚಿವರಾಗಿ ಪ್ರತಿ ಬೂತ್‌ನಲ್ಲಿ ಸುತ್ತಾಡಿದ್ದು ಎಷ್ಟು ಸರಿ?: ದಿವಂಗತ ಜಿ.ಮಲ್ಲಿಕಾರ್ಜುನಪ್ಪ 1998ರಲ್ಲಿ ಲೋಕಸಭೆಗೆಸ್ಪರ್ಧಿಸಿಸೋತಾಗಕಣ್ಣೀರುಬಂದಿತ್ತು. ನಾನು ನಾಲ್ಕು ಸಲ ವಿಧಾನಸಭೆ ಚುನಾವಣೆಯಲ್ಲಿ ನಿಂತು, ಸೋತವನು. ಎದುರಾಳಿ ಪಕ್ಷ ಎಷ್ಟೇ ಜೋರಾಗಿದ್ದರೂನಮ್ಮಕಾರ್ಯಕರ್ತರಪರಿಶ್ರಮ, ಪ್ರಯತ್ನದಿಂದ 63 ಸಾವಿರಕ್ಕೂ ಅಧಿಕ ಮತ ಈ ಸಲ ಗಳಿಸಿದ್ದೇವೆ. ಒಂದು ಲೋಟ ಟೀ ಋಣ ಸಹ ಇಟ್ಟುಕೊಳ್ಳಬಾರದು ಎಂಬುದಾಗಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ ಹೇಳಿದ್ದರು. ಅಂತಹ ವ್ಯಕ್ತಿ ಚುನಾವಣೆ ದಿನವೂ ದಕ್ಷಿಣ ಕ್ಷೇತ್ರದ ಪ್ರತಿ ಬೂತ್ ನಲ್ಲಿ ಸುತ್ತಾಡುತ್ತಿದ್ದರು. ನೀವೊಬ್ಬ ಜಿಲ್ಲಾ ಮಂತ್ರಿಯಾಗಿ ಅಡ್ಡಾಡುತ್ತಿದ್ದುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಡಿಸಿ, ಎಸ್‌ಪಿ, ಆರ್‌ಓಗೆ ಈ ವಿಚಾರ ತಂದರೂ ಯಾರೂ ಸ್ಪಂದಿಸಲಿಲ್ಲ. ದೂರು ನೀಡಲು ಪಾಲಿಕೆ ಕಚೇರಿಗೆತೆರಳಿದರೆಚುನಾವಣಾಧಿಕಾರಿಕಚೇರಿಯಲ್ಲೇ ಇರಲಿಲ್ಲ. ಅಧಿಕಾರಿಗಳ ವರ್ತನೆಯೇ ದಕ್ಷಿಣ ಕ್ಷೇತ್ರ ಉಪಚುನಾವಣೆಎಷ್ಟರಮಟ್ಟಿಗೆನ್ಯಾಯಯುತವಾಗಿ ಮಾಡಿದ್ದಾರೆಂಬುದುಮೇಲ್ನೋಟಕ್ಕೆಸ್ಪಷ್ಟವಾಗುತ್ತದೆ. ಡಿಆರ್‌ಆರ್‌ಶಾಲೆ ಮತ ಎಣಿಕೆ ಕೇಂದ್ರದ ಸ್ಟ್ರಾಂಗ್ ರೂಂ ಬೀಗಗಳನ್ನು ತೆಗೆಯದೇ, ಚಿಲಕಗಳನ್ನು ಒಡೆದು, ಮುರಿದು ಹಾಕಿದ್ದಾರೆ. ಇದರಲ್ಲೇ ಅಧಿಕಾರಿಗಳು ಎಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆಂಬುದು ಗೊತ್ತಾಗುತ್ತದೆ ಎಂದು ಯಶವಂತ ರಾವ್ ಜಾಧವ್ ದೂರಿದರು.

> ಏನೇ ಕೇಳಿದರೂ ಜಾಣ ಕುರುಡರಂತೆ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯ ವೇಳೆ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. 2028ರ ಸಾರ್ವತ್ರಿಕ ಚುನಾವಣೆಗೆ ನಾವು ತಯಾರಿ ನಡೆಸುತ್ತೇವೆ. ದಾವಣಗೆರೆ ನಗರಕ್ಕಾಗಲೀ, ಜಿಲ್ಲೆಗಾಗಲೀ ಜಿಲ್ಲಾ ಮಂತ್ರಿ ಯಾವುದೇ ವಿಶೇಷ ಅನುದಾನ ತಂದಿಲ್ಲ. ಆದರೆ, ಉಪ ಚುನಾವಣೆ ಗಿಮಿಕ್ ಮಾಡಲು ₹100 ಕೋಟಿ ಅನುದಾನ ಘೋಷಿಸಿದ್ದರಷ್ಟೇ.
>
> • **ಯಶವಂತ ರಾವ್ ಜಾಧವ್** ಬಿಜೆಪಿ ಹಿರಿಯ ಮುಖಂಡ

ದೂಡಾಮಾಜಿಅಧ್ಯಕ್ಷರಾಜನಹಳ್ಳಿಶಿವಕುಮಾರ ಮಾತನಾಡಿ, ಸತತ 3 ತಿಂಗಳು ಹಗಲು-ರಾತ್ರಿ ಶ್ರಮವಹಿಸಿ, ಮನೆ, ಮಠ ಬಿಟ್ಟು ನಮ್ಮೆಲ್ಲಾ ಕಾರ್ಯಕರ್ತರು ನಿಸ್ವಾರ್ಥದಿಂದ ಕೆಲಸ ಮಾಡಿದ್ದಾರೆ. ಬಿಜೆಪಿಯ ಓರ್ವ ಸಾಮಾನ್ಯ ಕಾರ್ಯಕರ್ತ ಹಾಗೂ ಜಿಲ್ಲಾ ಮಂತ್ರಿ ಮತ್ತು ಸಂಸದರ ಮಗ ಕಾಂಗ್ರೆಸ್ ಅಭ್ಯರ್ಥಿ. ಮುಂದಿನ ದಿನಗಳಲ್ಲೂಸಾಮಾನ್ಯವ್ಯಕ್ತಿಗೆನಿಲ್ಲಿಸಿಗೆಲ್ಲಿಸುತ್ತೇವೆ. ದಕ್ಷಿಣ ಕ್ಷೇತ್ರ ಚುನಾವಣೆಯಿಂದ ಇಡೀ ರಾಜ್ಯಕ್ಕೆ ಉತ್ತಮ ಸಂದೇಶ ರವಾನೆಯಾಗಿದೆ. ನಾವು ಯಾವುದೇ ಒತ್ತಡಕ್ಕೆ ಮಣಿಯಲ್ಲ ಎಂದರು.

ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಗೆದ್ದಿದೆ. ಅದರಲ್ಲೂ ಪಶ್ಚಿಮ ಬಂಗಾಳದಲ್ಲಿಬಿಜೆಪಿಗೆದ್ದಿದೆ. ದೇಶದ22 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಅದರಂತೆ ಕರ್ನಾಟಕ ರಾಜ್ಯದಲ್ಲೂ ಮುಂಬರುವ ದಿನಗಳಲ್ಲಿ ಬಿಜೆಪಿ ಆಡಳಿತಕ್ಕೆ ಬರಲಿದೆ. ನಮ್ಮೆಲ್ಲಾ ಮುಖಂಡರು, ಕಾರ್ಯಕರ್ತರ ಪರಿಶ್ರಮದಿಂದ ಮಾಜಿ ಪ್ರಧಾನಿ ಅಟಲ್‌ಬಿಹಾರಿವಾಜಪೇಯಿಹೇಳಿದ್ದಮಾತುಗಳನ್ನು ಸಾಕಾರಗೊಳಿಸಿದ್ದೇವೆ. ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಗಳಲ್ಲಿ ನಾವು ಆಡಳಿತಕ್ಕೆ ಬಂದಿದ್ದೇವೆ. 2028ರಲ್ಲಿರಾಜ್ಯದಲ್ಲೂಬಿಜೆಪಿಅಧಿಕಾರಕ್ಕೆಬರಲಿದೆ ಎಂದು ಅವರು ತಿಳಿಸಿದರು.

ಪಕ್ಷದ ಮುಖಂಡರಾದ ಟಿಂಕರ್‌ಮಂಜಣ್ಣ, ಶಿವನಗೌಡ ಟಿ.ಪಾಟೀಲ, ರಾಜು ಗೌಡ ಇತರರು ಇದ್ದರು.

ಗುಡಾಳಲ್ಲಿ ನೀರಿನ ಬವಣೆ ನೀಗಿಸಿದ ಬಸವಂತಪ್ಪ

ಗ್ರಾಪಂ ಎದುರು ಕೊರೆದ ಬೋರ್‌ವೆಲ್‌ನಲ್ಲಿ 2 ಇಂಚಿನಷ್ಟು ನೀರು: ಗ್ರಾಮಸ್ಥರು ಖುಷ್

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಮಾಯಕೊಂಡವಿಧಾನಸಭಾಕ್ಷೇತ್ರವ್ಯಾಪ್ತಿಯಗುಡಾಳ್ ಗ್ರಾಮದಲ್ಲಿತೀವ್ರವಾಗಿದ್ದಕುಡಿಯುವನೀರಿನಸಮಸ್ಯೆಗೆ ಈಗ ಮುಕ್ತಿ ಸಿಕ್ಕಿದೆ. ಶಾಸಕ ಕೆ.ಎಸ್.ಬಸವಂತಪ್ಪ ಅವರ ವಿಶೇಷ ಕಾಳಜಿಯಿಂದಾಗಿ ಮಂಗಳವಾರ ಗ್ರಾಮದಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆಸಿದ್ದು, ಉತ್ತಮ ಪ್ರಮಾಣದ ನೀರು ಲಭ್ಯವಾಗಿದೆ.

ಗ್ರಾಮದ ನೀರಿನ ಸಮಸ್ಯೆಯನ್ನು ಅರಿತ ಶಾಸಕ ಕೆ. ಎಸ್.ಬಸವಂತಪ್ಪ ಅವರು ಸ್ವತಃ ಸ್ಥಳಕ್ಕೆ ಭೇಟಿ ನೀಡಿ, ಅಧಿಕಾರಿಗಳೊಂದಿಗೆಚರ್ಚಿಸಿದ್ದರು. ಬಳಿಕಜಲಮೂಲದ ಸೂಕ್ತಪಾಯಿಂಟ್‌ಗುರುತಿಸಲಾಗಿತ್ತು. ಈಗಬೋರ್‌ವೆಲ್ ಕೊರೆಸಲಾಗಿದ್ದು, 2 ಇಂಚು ನೀರು ಲಭ್ಯವಾದ ಹಿನ್ನೆಲೆ ಗ್ರಾಮದ ಜನರಿಗೆ ನೀರಿನ ಸಮಸ್ಯೆ ನೀಗಿದಂತಾಗಿದೆ.

ಶಾಸಕಕೆ.ಎಸ್.ಬಸವಂತಪ್ಪ ಅವರು ಕೇವಲ ಗುಡಾಳ್ ಗ್ರಾಮ ಮಾತ್ರವಲ್ಲದೇ, ಸುತ್ತಮುತ್ತಲಿನ ಕದರಪ್ಪನಹಟ್ಟಿ, ಗುಡಾಳ್‌ಗೊಲ್ಲರಹಟ್ಟಿಹಾಗೂಕೆಂಚಮ್ಮನಹಳ್ಳಿಸೇರಿದಂತೆ ಹಲವು ಹಳ್ಳಿಗಳಿಗೂ ಭೇಟಿ ನೀಡಿದರು. ಈ ಸಂದರ್ಭ ಸ್ಥಳೀಯ ಜನರ ಸಮಸ್ಯೆಗಳನ್ನು ಆಲಿಸಿದರು. ನೀರಿನ ಸಮಸ್ಯೆ ಇರುವ ಕಡೆಗಳಲ್ಲಿ ತಕ್ಷಣವೇ ಬೋರ್‌ವೆಲ್ ಕೊರೆಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಬಾರಿ ಬಿಸಿಲಿನ ತಾಪಮಾನ ಹೆಚ್ಚಳದಿಂದ ಕ್ಷೇತ್ರದ ವ್ಯಾಪ್ತಿಯಸಾಕಷ್ಟುಗ್ರಾಮಗಳಲ್ಲಿಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ. ಕ್ಷೇತ್ರದ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದ ತಕ್ಷಣವೇ ಸೂಕ್ತ ಜಾಗದಲ್ಲಿ ಬೋರ್‌ವೆಲ್ ಕೊರೆಸಿ ಕುಡಿಯುವ ನೀರು ಪೂರೈಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಲ್ಲದೆ, ಖಾಸಗಿ ಕೊಳವೆಬಾವಿಗಳಿಂದಲೂ ನೀರು ಪಡೆದು ಟ್ಯಾಂಕರ್‌ಮೂಲಕ ಸರಬರಾಜು ಮಾಡಬೇಕು. ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸಲು ಅನುಕೂಲ ಆಗುವಂತೆ ಎಲ್ಲಾ ಗ್ರಾಮಗಳಲ್ಲಿ 4 ನೀರಿನ ತೊಟ್ಟಿಗಳನ್ನು ನಿರ್ಮಾಣ ಮಾಡಬೇಕು. ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕೆಂದು ಸೂಚಿಸಿದರು.



ಗುಡಾಳ್‌ನ ಗ್ರಾಪಂ ಕಚೇರಿ ಮುಂಭಾಗದಲ್ಲಿ ಶಾಸಕ ಕೆ.ಎಸ್.ಬಸವಂತಪ್ಪ ಸಮ್ಮುಖ ಬೋರ್‌ವೆಲ್ ಕೊರೆಸಲಾಯಿತು.

> ಬೇಸಿಗೆ ತೀವ್ರವಾಗುತ್ತಿರುವ ಹಿನ್ನೆಲೆ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಕೊರತೆ ಗಂಭೀರ ಸಮಸ್ಯೆಯಾಗಿದೆ. ಜನರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ.
>
> • **ಕೆ.ಎಸ್.ಬಸವಂತಪ್ಪ** ಶಾಸಕ

ಮಾಯಕೊಂಡ ಕ್ಷೇತ್ರ ಶಾಸಕ ಕೆ.ಎಸ್. ಬಸವಂತಪ್ಪ ಅವರ ಕಾರ್ಯವೈಖರಿಗೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭ ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ. ಅಣಜಿ ಚಂದ್ರಣ್ಣ, ಗ್ರಾಮದ ಮುಖಂಡರಾದ ಕಲ್ಲೇಶ್, ಶಿವಣ್ಣ, ಈಶ್ವರ್, ವೆಂಕಟೇಶ್, ಕರಿಯಪ್ಪ, ಪ್ರಕಾಶ್, ಪಿಡಿಒ ಸುರೇಶ್, ಗ್ರಾಪಂ ಆಡಳಿತಾಧಿಕಾರಿ ಮಲ್ಲೇಶ್ ನಾಯ್ಕ್, ಎಂಜಿನಿಯರ್‌ಆಸ್ಮಾ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಪಂಚಮಸಾಲಿ ಪೀಠದಲ್ಲಿ 31ರವರೆಗೆ ಸಭೆ-ಸಮಾರಂಭ ನಿಷೇಧ: ಡಿಸಿ

ಹರಿಹರ: ಹರಿಹರದ ಪಂಚಮಸಾಲಿ ಪೀಠದ ಟ್ರಸ್ಟಿಗಳು ಹಾಗೂ ವಚನಾನಂದ ಶ್ರೀಗಳ ಬೆಂಬಲಿಗರ ನಡುವಿನ ಸಂಘರ್ಷ ತಾರಕಕ್ಕೇರಿರುವ ಹಿನ್ನೆಲೆ, ಮಠದ ಆವರಣದಲ್ಲಿ



ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ದಾವಣಗೆರೆ ಜಿಲ್ಲಾಧಿಕಾರಿ ಸೋಮವಾರ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಮೇ 4ರಿಂದ ಮೇ 31ರವರೆಗೆ ಪೀಠದ ಆವರಣದಲ್ಲಿ ಯಾವುದೇ ರೀತಿಯ ಸಭೆ- ಸಮಾರಂಭ ಹಾಗೂ ಪತ್ರಿಕಾಗೋಷ್ಠಿಗಳನ್ನು ನಡೆಸದಂತೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ 163ರ ಪ್ರಕಾರ ನಿಷೇಧಾಜ್ಞೆ ಜಾರಿಗೊಳಿಸಿ ಡಿಸಿ ಗಂಗಾಧರ ಸ್ವಾಮಿ ಆದೇಶ ಹೊರಡಿಸಿದ್ದಾರೆ.

ಮಾ.10 ರಿಂದ ಏ.27 ರವರೆಗೆ ಮಠದಲ್ಲಿ ಟ್ರಸ್ಟಿಗಳು ಮತ್ತು ವಚನಾನಂದ ಶ್ರೀಗಳ ಬೆಂಬಲಿಗರನಡುವೆನಡೆದಸರಣಿಸಭೆಗಳುಹಾಗೂಪತ್ರಿಕಾಗೋಷ್ಠಿಗಳುಉದ್ವಿಗ್ನವಾತಾವರಣ ನಿರ್ಮಿಸಿವೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರು ವರದಿ ನೀಡಿದ್ದಾರೆ. ಮಠದಲ್ಲಿ ಉದ್ರೇಕಿತ ಭಾಷಣಗಳನ್ನು ಮಾಡುವ ಮೂಲಕ ಮತ್ತು ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸುವ ಮೂಲಕ ಸಾರ್ವಜನಿಕ ಶಾಂತಿ ಕದಡಲಾಗುತ್ತಿದೆ. ಇದರಿಂದ ಮಠದ ಆಸ್ತಿಗೆ ಹಾನಿಯಾಗುವ ಮತ್ತು ಸಾರ್ವಜನಿಕರ ಪ್ರಾಣಹಾನಿ ಆಗುವ ಸಾಧ್ಯತೆಗಳಿವೆ ಎಂದು ತಿಳಿಸಲಾಗಿದೆ. ಈ ಹಿನ್ನೆಲೆ ನಿಷೇಧಾಜ್ಞೆ ಹೊರಡಿಸಲಾಗುತ್ತಿದೆ ಎಂದು ಡಿಸಿ ಆದೇಶದಲ್ಲಿ ವಿವರಿಸಲಾಗಿದೆ.

ಈನಿಷೇಧಾಜ್ಞೆಯುಕೇವಲಸಭೆ, ಸಮಾರಂಭಮತ್ತುಪತ್ರಿಕಾಗೋಷ್ಠಿಗಳಿಗೆಅನ್ವಯಿಸಲಿದೆ. ಮಠದಲ್ಲಿ ನಡೆಯುವ ದೈನಂದಿನ ಧಾರ್ಮಿಕ ಪೂಜಾ ವಿಧಾನಗಳಿಗೆ ಯಾವುದೇ ಅಡ್ಡಿ ಆಗುವುದಿಲ್ಲ. ಮೇ 31ರವರೆಗೆ ಯಾವುದೇ ಬಣಗಳು ಶಕ್ತಿ ಪ್ರದರ್ಶನ ಮಾಡುವಂತಿಲ್ಲ.

ಈ ಆದೇಶದ ಪ್ರತಿಯನ್ನು ವಚನಾನಂದ ಮಹಾಸ್ವಾಮಿಗಳು, ಲೆಕ್ಕಕೊಡಿ ಚಳವಳಿ ಸಮಿತಿಯ ಅಧ್ಯಕ್ಷ ಎಂ.ಜಿ. ಪರಮೇಶ್ವರಗೌಡ, ಬಿ.ಸಿ. ಉಮಾಪತಿ ಮತ್ತು ಜ್ಯೋತಿ ಪ್ರಕಾಶ್ ಅವರಿಗೆ ರವಾನಿಸಲಾಗಿದೆ. ಪೀಠದಲ್ಲಿ ಸದ್ಯ ಪರಿಸ್ಥಿತಿ ಜಿಲ್ಲಾಡಳಿತದ ಹದ್ದಿನ ಕಣ್ಣಿನಲ್ಲಿದ್ದು, ಶಾಂತಿ ಕಾಪಾಡಲು ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ.

ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳ ಅನಾವರಣ ಶ್ಲಾಘನೀಯ: ಜಯಪ್ಪ

ಜೋಳದಾಳ್ ಶಾಲೆಯಲ್ಲಿ ಬೇಸಿಗೆ ಶಿಬಿರ ಸಮಾರೋಪ



ಚನ್ನಗಿರಿ: ಗ್ರಾಮಾಂತರ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆ ಮಕ್ಕಳಿಗೆ ಬೇಸಿಗೆ ಶಿಬಿರಗಳು ಸಿಗುವುದು ಅಪರೂಪವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಲ್.ಜಯಪ್ಪ ಹೇಳಿದರು.

ತಾಲೂಕಿನ ಜೋಳದಾಳ್ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ರಂಗ ಶಿಕ್ಷಕ ಡಾ.ವೆಂಕಟೇಶ್ವರಮತ್ತುನಿಜಗುಣಶಿವಯೋಗಿಅವರು15ದಿನಗಳಕಾಲಆಯೋಜಿಸಿರುವ ಗುಡ್ಡದಮಕ್ಕಳಬಣ್ಣದಬೇಸಿಗೆಶಿಬಿರಸಮಾರೋಪಸಮಾರಂಭದಲ್ಲಿಅವರುಮಾತನಾಡಿದರು. ಇಂಥಸಂದರ್ಭದಲ್ಲಿಆಸಕ್ತಿಯಿಂದಜೋಳದಾಳ್‌ಗ್ರಾಮದಪ್ರೌಢಶಾಲೆಯರಂಗ ಶಿಕ್ಷಕ ವೆಂಕಟೇಶ್ ಮತ್ತು ಆಂಗ್ಲ ಭಾಷೆಯ ಶಿಕ್ಷಕ ನಿಜಗುಣ ಶಿವಯೋಗಿ ಅವರು ಮಕ್ಕಳಿಗೆ ಬೇಸಿಗೆ ಶಿಬಿರ ನಡೆಸುತ್ತಿದ್ದಾರೆ. ಆ ಮೂಲಕ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರತರುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ ಎಂದರು.

ಶಿಬಿರದ ರೂವಾರಿ ಡಾ.ವೆಂಕಟೇಶ್ ಮಾತನಾಡಿ, ಶಿಬಿರದಲ್ಲಿ ಡಾ. ಎಚ್.ಎಸ್. ವೆಂಕಟೇಶ ಮೂರ್ತಿ ಅವರ ಧರಣಿ ಮಂಡಲ ಮಧ್ಯದೊಳಗೆ ನಾಟಕವನ್ನು ರಂಗ ಶಿಕ್ಷಕ ಡಾ.ವೆಂಕಟೇಶ್ ನಿರ್ದೇಶನದಲ್ಲಿ ಹಾಗೂ ಸೊರಬದ ಉದಯ್ ಸಹ ನಿರ್ದೇಶನದಲ್ಲಿ ಶಿಬಿರದ ಮಕ್ಕಳಿಂದ ನಾಟಕ ಪ್ರದರ್ಶಿಸಲಾಗಿದೆ ಎಂದು ವಿವರಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕುಮಾರ್‌ತಳವಾರ್, ಮಾವಿನಕಟ್ಟೆ ಶ್ರೀಕಾಂತ್, ಜೋಳದಾಳ್ ಪ್ರಕಾಶ್, ಲೋಕೇಶ್, ಸಿದ್ದಲಿಂಗಪ್ಪ, ಅಣ್ಣಪ್ಪ, ಎಸ್ .ಡಿ.ಎಂ.ಸಿ ಅಧ್ಯಕ್ಷ ಶ್ರೀನಿವಾಸ್ ಭಾಗವಹಿಸಿದ್ದರು.

ಹೊಸ ಅಲೆ | ಎಚ್.ಪಿ. ರಾಜೇಶ್ ಅಭಿಮತ | ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಗೆಲುವು: ಸಂಭ್ರಮಾಚರಣೆ

ದಾವಣಗೆರೆಯಲ್ಲಿ ಬಿಜೆಪಿ ಸೋತಿಲ್ಲ, ನೈತಿಕ ಗೆಲುವಾಗಿದೆ

• **ಕನ್ನಡಪ್ರಭ ವಾರ್ತೆ** ಜಗಳೂರು

ಪಂಚ ರಾಜ್ಯಗಳ ಚುನಾವಣೆಯಲ್ಲಿ 3 ರಾಜ್ಯಗಳಲ್ಲಿಬಿಜೆಪಿಭರ್ಜರಿಜಯಸಾಧಿಸಿದ ಹಿನ್ನೆಲೆ ಸೋಮವಾರ ಜಗಳೂರಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಮಂಡಲ ಬಿಜೆಪಿ ಅಧ್ಯಕ್ಷ ಮರುಳಾರಾಧ್ಯ, ಮಾಜಿ ಶಾಸಕ ಎಚ್.ಪಿ. ರಾಜೇಶ್ ಸಮ್ಮುಖದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಮಾಜಿ ಶಾಸಕ ಎಚ್.ಪಿ. ರಾಜೇಶ್ ಮಾತನಾಡಿ, ದೇಶದ ಗಮನ ಪಂಚರಾಜ್ಯ ವಿಧಾನಸಭಾ ಚುನಾವಣೆ ಫಲಿತಾಂಶ ಕಡೆ ಇತ್ತು. ಇದರಲ್ಲಿ ಬಿಜೆಪಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಹೆಚ್ಚು ಸ್ಥಾನಗಳನ್ನು ಪಡೆದಿದ್ದು, ಅಧಿಕಾರ ಹಿಡಿಯಲಿದೆ. ಈ ಗೆಲವು ಮುಂದೆ ಕರ್ನಾಟದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ದಿಕ್ಸೂಚಿಯಾಗಲಿದೆ.



ಜಗಳೂರಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಮಂಡಲ ಬಿಜೆಪಿ ಅಧ್ಯಕ್ಷ ಮರುಳಾರಾಧ್ಯ, ಮಾಜಿ ಶಾಸಕ ಎಚ್.ಪಿ. ರಾಜೇಶ್ ಸಮ್ಮುಖ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಪ್ರಧಾನ ಮಂತ್ರಿ ಮೋದಿ ಅವರ ಉತ್ತಮ ಆಡಳಿತ, ಅಮಿತ್ ಷಾ ಅವರ ಚುನಾವಣೆ ರಣನೀತಿಯಿಂದ ಪಕ್ಷಕ್ಕೆ ಗೆಲುವು ಸಿಕ್ಕಿದೆ ಎಂದು ಸಂತಸ ವ್ಯಕ್ತಪಡಿಸಿದರು.

ದಾವಣಗೆರೆಯಲ್ಲಿ ಬಿಜೆಪಿ ಸೋತಿಲ್ಲ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರಿಗೆ ನೈತಿಕ ಗೆಲುವಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಕಡಿಮೆ ಅಂತರದ ಮತಗಳಿಂದಷ್ಟೆ ಗೆಲುವು ಪಡೆದಿದ್ದಾರೆ. ನಿಜವಾಗಿಯೂ ದಾವಣಗೆರೆಯಮತದಾರರಬೆಂಬಲಿಸಿದ್ದಾರೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಬಿಜೆಪಿ ಮಂಡಲ ಅಧ್ಯಕ್ಷ ಮರುಳಾರಾಧ್ಯ ಮಾತನಾಡಿ, ಮತದಾರರಮನಸ್ಸುಮಾಡಿದರೆ ಏನೆಲ್ಲ ಬದಲಾವಣೆ ಮಾಡಲು ಸಾಧ್ಯ ಎನ್ನುವುದಕ್ಕೆ ಪಶ್ಚಿಮ ಬಂಗಾಳವೇ ಸಾಕ್ಷಿಯಾಗಿದೆ. ಅಲ್ಲಿನ ದುರಾಡಳಿತ, ದೌರ್ಜನ್ಯದಿಂದ ಜನರು ಬೇಸತ್ತಿದ್ದರು. ಅಲ್ಲದೇ ಬಾಂಗ್ಲಾ ನುಸುಳುಕೋರರಿಗೆ ಅವಕಾಶ ನೀಡಿದ್ದರು. ಇದನ್ನು ಪ್ರಧಾನಿ ನರೇಂದ್ರ ಮೋದಿ ಆಡಳಿತ ತಡೆಹಿಡಿಯುವ ಮೂಲಕ ಜನಪರ ಕಾರ್ಯಕ್ರಮಗಳನ್ನು ಕೊಟ್ಟಿದೆ. ಆದ್ದರಿಂದ ಈ ಬಾರಿ ಮೂರು ರಾಜ್ಯಗಳಲ್ಲೂ ಭರ್ಜರಿ ಜಯಕಂಡಿದೆ ಎಂದರು.

ಈಸಂದರ್ಭಮಾಜಿಪಪಂಅಧ್ಯಕ್ಷಜೆ.ವಿ. ನಾಗರಾಜ್, ಮುಖಂಡರಾದ ಬಿಸ್ತುವಳ್ಳಿ ಬಾಬು, ಬಿಜೆಪಿಕಾರ್ಯದರ್ಶಿಶಿವುಲ್ಯಾಬ್, ತಾಪಂಮಾಜಿಸದಸ್ಯಸೂರಲಿಂಗಪ್ಪ, ಬಾಬು, ಆಯಿಲ್ ಬಾಬು, ಹೊನ್ನಮರಡಿ ಬಾಲರಾಜ್, ತಮಲೇಹಳ್ಳಿ ಮಾರುತಿ, ಶ್ರೀನಿವಾಸ್, ಕೆಂಚಮ್ಮ ಧನ್ಯಕುಮಾರ್, ವಿಕ್ರಮ್, ಹೊನ್ನೂರಸ್ವಾಮಿ, ಓಬಳೇಶ್, ನರಸಿಂಹಮೂರ್ತಿ, ಉಮೇಶ್, ಬಸವರಾಜ್ ಮತ್ತಿತ್ತರರಿದ್ದರು.

ಟ್ರಸ್ಟಿಗಳಲ್ಲಿ ಸುಳ್ಳು ಲೆಕ್ಕದ ಖಳನಾಯಕ ಆಗಿರುವ ಬಿ.ಸಿ. ಉಮಾಪತಿ ಅವರು ನೀಡಿದ ₹27.5 ಕೋಟಿ ಲೆಕ್ಕದಲ್ಲಿ ಭಾರಿ ಅವ್ಯವಹಾರ ಬಯಲಾಗಿದೆ. 175 ಕೆ.ಜಿ ಬೆಳ್ಳಿ ಎಲ್ಲಿದೆ? ಟ್ರಸ್ಟ್ ಹೆಸರಿನಲ್ಲಿ ಎಷ್ಟು ಅಕೌಂಟ್‌ಗಳಿವೆ? ತಾಕತ್ತಿದ್ದರೆ ವಚನಾನಂದ ಶ್ರೀಗಳನ್ನು ಪೀಠದಿಂದ ಹೊರಗೆ ಹಾಕಲಿ ನೋಡೋಣ.

• ಎಚ್.ಎಸ್. ಶಿವಶಂಕರ್ ಮಾಜಿ ಶಾಸಕ.

ಸ್ಟಾಲಿನ್‌ನಂತೆ ಕಾಂಗ್ರೆಸ್ಸಿಗೂ ಮನೆ ಗ್ಯಾರಂಟಿ

ಉಪ ಚುನಾವಣೆಗೆ ಬಂದ ಗೃಹಲಕ್ಷ್ಮಿ ಮತ್ತೆ ಜಿಪಂ, ತಾಪಂ ಚುನಾವಣೆಗೆ ಬರೋದು: ವಿಜಯೇಂದ್ರ ಟೀಕೆ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಉಚಿತ ಅಂತಾ ತಮಿಳುನಾಡಿನ ಜನರಿಗೆ ಹೇಳಿದ್ದ ಸ್ಟಾಲಿನ್‌ಗೆಮನೆಖಚಿತವಾಗಿದ್ದು, ಗ್ಯಾರಂಟಿಹೆಸರನ್ನು ಹೇಳಿಕೊಂಡು ಚುನಾವಣೆ ಮಾಡುತ್ತಿರುವ ಕಾಂಗ್ರೆಸ್ಸಿಗೂ ಮನೆ ಗ್ಯಾರಂಟಿಯಾಗಿದ್ದು, ಡಿಎಂಕೆ ಸ್ಥಿತಿಯೇ ನಮ್ಮ ರಾಜ್ಯದಲ್ಲೂ ಕಾಂಗ್ರೆಸ್ಸಿಗೆ ಬರಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ ನುಡಿದಿದ್ದಾರೆ.

ನಗರದಲ್ಲಿ ದಕ್ಷಿಣ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿ, ಶ್ರೀನಿವಾಸ ತಾಯಿ, ಪತ್ನಿ, ಸಹೋದರ ಗಣೇಶ, ಸಹೋದರಿಯರು, ಕುಟುಂಬಕ್ಕೆ ಧೈರ್ಯ ಹೇಳಿದ ಸುದ್ದಿಗಾರರೊಂದಿಗೆ ಮಾತನಾಡಿದರು. ಉಚಿತ ಉಚಿತ ಅಂತಾ ಹೇಳಿದ್ದ ಸ್ಟಾಲಿನ್‌ಗೆ ಮನೆ ಹೇಗೆ ಖಚಿತವಾಗಿದೆಯೋ ಅದೇ ಸ್ಥಿತಿ ಗ್ಯಾರಂಟಿ ಜಪಿಸುವ ಕಾಂಗ್ರೆಸ್ಸಿಗೆ ಕರ್ನಾಟಕದಲ್ಲೂ ಮನೆ ಗ್ಯಾರಂಟಿ ಎಂದರು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನವರೇ ಉಳಿದ 2 ವರ್ಷಕ್ಕಾದರೂ ಗೆಲ್ಲಿಸುವಂತೆ ತಮ್ಮ ಅಭ್ಯರ್ಥಿಪರವಾಗಿಹೇಳಿಕೊಂಡಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಫಲಿತಾಂಶ, ಸ್ಟ್ರಾಂಗ್ ರೂಂ ಬೀಗ ಒಡೆದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಈ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು, ಮುಂದೆ ಏನು ಮಾಡಬೇಕೆಂಬ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇವೆ. ದಾವಣಗೆರೆ ದಕ್ಷಿಣದ ಬಗ್ಗೆ ನಾವು ಬಹಳ ನಿರೀಕ್ಷೆ ಹೊಂದಿದ್ದೆವು ಎಂದು ಅವರು ತಿಳಿಸಿದರು.

ಬಾಗಲಕೋಟೆಯಲ್ಲಿಸ್ವತಃ ಸಿಎಂ ಸಿದ್ದರಾಮಯ್ಯ ಗ್ಯಾರಂಟಿ ಗ್ಯಾರಂಟಿ ಅಂತಾ ಹೇಳಿಕೊಂಡು, 10-15 ದಿನ ಅಲ್ಲೇ ಕುಳಿತಿದ್ದರು. ಗೃಹಲಕ್ಷ್ಮಿ ಯೋಜನೆ ಬಗ್ಗೆ ನಾನು ಹಿಂದೆಯೇ ಹೇಳಿದ್ದೆ. ಗೃಹಲಕ್ಷ್ಮಿ ಯೋಜನೆ ಎಂಬುದು ಕಾಂಗ್ರೆಸ್ಸಿನವರ ಪಾಲಿಗೆ ಚುನಾವಣೆ ಲಕ್ಷ್ಮಿಯಾಗಿದೆ. ಚುನಾವಣೆ ಸಮೀಪಿಸಿದಾಗ, ಮತದಾನಕ್ಕೆ 3-4 ದಿನವಿದ್ದಾಗ ಹಣ ಬಿಡುಗಡೆ ಮಾಡುತ್ತಾರೆ. ಈಗ ಉಪ ಚುನಾವಣೆಯಾಗಿವೆ. ಇನ್ನು ಮುಂದಿನ ಗೃಹಲಕ್ಷ್ಮಿ ಮುಂಬರುವ ಜಿಪಂ, ತಾಪಂ ಚುನಾವಣೆಗೆ ಬಂದಾಗಲೇ ಫಲಾನುಭವಿಗಳ ಕೈ ಸೇರುವುದು ಎಂದು ಕುಟುಕಿದರು.

ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆ ಫಲಿತಾಂಶ ನಮ್ಮ ಕಣ್ಣಮುಂದಿದೆ. ನಾವು ಸಾಕಷ್ಟು ನಿರೀಕ್ಷೆ ಹೊಂದಿದ್ದೆವು. ಅದರಲ್ಲೂ ದಾವಣಗೆರೆ ಬಗ್ಗೆ ಸಾಕಷ್ಟು ನಿರೀಕ್ಷೆ ಇತ್ತು. ಉಪ ಚುನಾವಣೆಯಲ್ಲಿ ಆಡಳಿತ ಪಕ್ಷದ ಪರ ಮತದಾರರ ಒಲವುಇರುತ್ತದೆ. ಕಾಂಗ್ರೆಸ್ ಅಭ್ಯರ್ಥಿಗಳಪರವಾಗಿ ಎರಡೂ ಕಡೆ ಅನುಕಂಪ, ಆಡಳಿತ ಪಕ್ಷದ ವ್ಯವಸ್ಥೆ, 10-15 ದಿನಗಳ ಕಾಲ ಸಿಎಂ ಬೀಡುಬಿಟ್ಟಿದ್ದು ಸಹ ಪರಿಣಾಮ ಬೀರಿದೆ. ಸಚಿವರು ಹಳ್ಳಿಹಳ್ಳಿಗೆ ಬಂದು, ಕುಳಿತಿದ್ದರು. ಇದನ್ನು ತಪ್ಪು ಅಂತಾ ನಾನು ಹೇಳುವುದಿಲ್ಲ. ಈ ಹಿಂದೆ ಬಿ.ಎಸ್. ಯಡಿಯೂರಪ್ಪ ಕಾಲದಲ್ಲಿ 17 ಕ್ಷೇತ್ರಗಳ ಪೈಕಿ 14 ಕ್ಷೇತ್ರಗಳ ಉಪ ಚುನಾವಣೆ ನಾವು ಗೆದ್ದಿದ್ದೆವು ಎಂದು ತಿಳಿಸಿದರು.



ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ನಿವಾಸದಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿದರು.

ಚುನಾವಣೆಯಲ್ಲಿ ತಂತ್ರ, ಕುತಂತ್ರ ಸಹಜ: ವಿಜಯೇಂದ್ರ

ಚುನಾವಣೆಯೆಂದರೆ ತಂತ್ರಗಾರಿಕೆ, ಕುತಂತ್ರಗಾರಿಕೆ ಇದ್ದೇ ಇರುತ್ತದೆ. ಅದರಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ದಕ್ಷಿಣ ಕ್ಷೇತ್ರದ 8 ಗ್ರಾಪಂ ವ್ಯಾಪ್ತಿಯಲ್ಲಿ ಬಿಜೆಪಿಗೆ ಅತೀ ಲೀಡ್ ಆಗಬೇಕಾಗಿತ್ತು. ಒಳ ಏಟು ಏನಿಲ್ಲ. ಗ್ರಾಮೀಣ ಭಾಗದಲ್ಲಿ 5 ಸಾವಿರ ಲೀಡ್ ನಿರೀಕ್ಷೆ ಇತ್ತು. 1400 ಲೀಡ್ ಆಗಿದೆ. ದಾವಣಗೆರೆ, ಬಾಗಲಕೋಟೆಯಲ್ಲಿ ನಮ್ಮ ಸಂಘಟನೆ ಬಲಿಷ್ಠವಾಗಿದೆ. ಇದಕ್ಕಿಂತಲೂ ಹೆಚ್ಚು ವ್ಯವಸ್ಥಿತವಾಗಿ ಮಾಡಲು ಸಾಧ್ಯವಿಲ್ಲ. ಶಿಕಾರಿಪುರದಲ್ಲೂ ನಾವು ಇಷ್ಟೊಂದು ರೀತಿ ಚುನಾವಣೆ ಮಾಡಿರಲಿಲ್ಲ. ನಿತ್ಯ ಬೆಳಗ್ಗೆ 7 ಗಂಟೆಗೆ ಇಲ್ಲಿನ ಬಿಜೆಪಿ ಕಚೇರಿಯಲ್ಲಿ ನಮ್ಮ ಮುಖಂಡರು, ಕಾರ್ಯಕರ್ತರು ಕೂಡುತ್ತಿದ್ದರು. ನಿನ್ನೆ ದಿನ ಟಾರ್ಗೆಟ್ ಬಗ್ಗೆ ಚರ್ಚಿಸಿ, ಇವತ್ತು ಎಷ್ಟು ಹಳ್ಳಿ ಭೇಟಿ ಅಂತಾ ವ್ಯವಸ್ಥಿತವಾಗಿ ಪ್ಲಾನ್ ಮಾಡುತ್ತಿದ್ದರು. ಪ್ರತಿಯೊಬ್ಬ ಮುಖಂಡರು, ಕಾರ್ಯಕರ್ತರು ಶೇ.100 ಶ್ರಮ ಹಾಕಿದ್ದು, ಅದರಲ್ಲಿ ಚ್ಯುತಿಯಾಗಿಲ್ಲ ಎಂದು ಬಿ.ವೈ.ವಿಜಯೇಂದ್ರ ಅಭಿಪ್ರಾಯಪಟ್ಟರು.

ಆಡಳಿತ ಪಕ್ಷ ಪರ ಜನರ ಒಳವಿದ್ದರೂ ಬಾಗಲಕೋಟೆಗಿಂತಲೂ ಹೆಚ್ಚಾಗಿ ದಕ್ಷಿಣದಲ್ಲಿ ಶ್ರೀನಿವಾಸ ಗೆಲ್ಲಲು ಒಳ್ಳೆಯ ವಾತಾವರಣ ನಿರ್ಮಾಣವಾಗಿತ್ತು. ಎರಡೂ ಕ್ಷೇತ್ರದಲ್ಲೂ ಕಾರ್ಯಕರ್ತರು, ಸ್ಥಳೀಯ ಮುಖಂಡರು, ಹಗಲು- ರಾತ್ರಿ ಶ್ರಮ ಹಾಕಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ, ಬಾಗಲಕೋಟೆಯಲ್ಲಿದ್ದ ಎಲ್ಲ ಗೊಂದಲಗಳನ್ನೆಲ್ಲಾ ಬದಿಗಿಟ್ಟು, ತನು, ಮನ, ಧನ ಅರ್ಪಿಸಿ, ಹೋರಾಟ ಮಾಡಿದ್ದರು. ನಿರೀಕ್ಷಿತ ಮಟ್ಟದಲ್ಲಿ ಮತ ಬರಲಿಲ್ಲ. ವಿಶೇಷವಾಗಿ ಶ್ರೀನಿವಾಸ ದಾಸಕರಿಯಪ್ಪ ಹಿಂದಿನಿಂದಲೂ ಬಡವರ ಮಧ್ಯೆ ಇದ್ದವರು, ಬಡವರ ಜೊತೆಗೆ ಒಡನಾಟ ಹೊಂದಿದ್ದು ಅನುಕೂಲವಾಯಿತು. ಸುಮಾರು 64 ಸಾವಿರ ಮತ ಪಡೆದಿದ್ದಾರೆ ಎಂದು ಅವರು ಹೇಳಿದರು.

ದಕ್ಷಿಣ ಕ್ಷೇತ್ರದಲ್ಲಿ ಸುಮಾರು 70 ಸಾವಿರ ಮತಗಳ ಗುರಿಯೊಂದಿಗೆ ನಮ್ಮ ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಶ್ರಮ ಹಾಕಿದ್ದರು. ನಮ್ಮ ಪ್ರಯತ್ನ ಎಲ್ಲೋ ಒಂದಿಷ್ಟು ಕಡಿಮೆಯಾಯಿತು ಅನಿಸುತ್ತದೆ. ಆಡಳಿತ ಪಕ್ಷದ ಹಣಬಲದ ಬಗ್ಗೆ ನಾನು ಮಾತನಾಡುವುದಿಲ್ಲ. ಶ್ರೀನಿವಾಸ ಇಲ್ಲಿ ಶಕ್ತಿ ಮೀರಿ, ಗೆಲ್ಲಲೇಬೇಕೆಂದು ಹಠ ತೊಟ್ಟು, ಸಂಘಟನೆ, ಸಹಕಾರದಲ್ಲಿ ಒಳ್ಳೆಯ ಚುನಾವಣೆ ಮಾಡಿದ್ದಾರೆ. ಎಲ್ಲೋ ಒಂದು ಕಡೆ ನಮ್ಮ ಅದೃಷ್ಟ ಕೈಹಿಡಿಯಲಿಲ್ಲ. ಕಳೆದಬಾರಿ ಬಿ.ಜಿ.ಅಜಯಕುಮಾರ ಸಹ ಸಾಕಷ್ಟು ಶ್ರಮ ಹಾಕಿದ್ದರು. ಶ್ರೀನಿವಾಸ, ಅಜಯಕುಮಾರ ಇಬ್ಬರ ನಡವಳಿಕೆ ಗಮನಿಸಿದ್ದೇನೆ. ಜನಾನುರಾಗಿ ವ್ಯಕ್ತಿತ್ವ ಗಮನಿಸಿದ್ದೇವೆ. ಬರುವ ದಿನಗಳು ಬಿಜೆಪಿ ದಿನಗಳೆಂದಷ್ಟೇ ಹೇಳಬಲ್ಲೆ ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.

ಪಶ್ಚಿಮ ಬಂಗಾಳದಲ್ಲಿ ಒಬ್ಬ ಬಿಜೆಪಿ ಶಾಸಕನನ್ನೂ ಗೆಲ್ಲಿಸುತ್ತೇವೆ ಎಂದುಕೊಂಡಿರಲಿಲ್ಲ. ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರದ 15 ವರ್ಷ ಆಡಳಿತ, ಮಮತಾ ಸೇರಿದಂತೆ ಆ ಪಕ್ಷದವರು ಸೊಕ್ಕು, ಅಧಿಕಾರ ಮದದಿಂದ ತೇಲುತ್ತಿದ್ದರು. ಹಿಂದೂಗಳಿಗೆ ಅವಮಾನಿಸುವ ಕೆಲಸವನ್ನು ಪಶ್ಚಿಮ ಬಂಗಾಳದಲ್ಲಿ ಮಾಡಲಾಗುತ್ತಿತ್ತು. ಅದನ್ನೆಲ್ಲಾ ಮೆಟ್ಟಿ ನಿಂತು, ವಿಶೇಷವಾಗಿ ಪ್ರಧಾನಿ ನರೇಂದ್ರ ಮೋದಿ ನಾಯಕತ್ವ, ಜನಪ್ರಿಯರೆ, ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ಕೇಂದ್ರ ಗೃಹಸಚಿವ ಅಮಿತ್ ಶಾ ನೇತೃತ್ವದಲ್ಲಿ ಗೆಲುವು ಸಾಧ್ಯವಾಗಿದೆ. ಅದೇ ರೀತಿ ಬದಲಾವಣೆ ನಮ್ಮ ರಾಜ್ಯದಲ್ಲೂ ಇನ್ನು 2 ವರ್ಷದಲ್ಲೇ ಆಗಲಿದೆ ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

ಪಕ್ಷದ ಜಿಲ್ಲಾಧ್ಯಕ್ಷ ಎನ್.ರಾಜಶೇಖರ ನಾಗಪ್ಪ, ಪರಾಜಿತ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ, ಮಾಜಿ ಸಚಿವ ರೇಣುಕಾಚಾರ್ಯ, ಮಾಜಿ ಶಾಸಕರಾದ ರಾಮಚಂದ್ರ, ಬಸವರಾಜ ನಾಯ್ಕ, ಮಾಜಿ ಮೇಯರ್ ಅಜಯಕುಮಾರ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ, ಪಿ.ಸಿ. ಶ್ರೀನಿವಾಸ ಭಟ್, ದೊಗ್ಗಳ್ಳಿ ವೀರೇಶ, ಎನ್.ಎಂ. ಮುರುಗೇಶ, ಧನಂಜಯ, ಗಣೇಶ ಟಿ.ದಾಸಕರಿಯಪ್ಪ, ಶ್ರೀಮತಿ ದಾಸಕರಿಯಪ್ಪ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬ ವರ್ಗ ಇತರರಿದ್ದರು.

ಶ್ರೀನಿವಾಸ ನಿವಾಸಕ್ಕೆ ವಿಜಯೇಂದ್ರ

ಚುನಾವಣೆ ಸೋಲಿಗೆ ಎದೆಗುಂದಬೇಕಾಗಿಲ್ಲ: ಕುಟುಂಬಕ್ಕೆ ಧೈರ್ಯ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಕೆಲವೇ ಸಾವಿರ ಮತಗಳ ಅಂತರದಲ್ಲಿ ಕಾಂಗ್ರೆಸ್ಸಿಗೆ ತೀವ್ರ ಪೈಪೋಟಿಯೊಡ್ಡಿ, ಸೋಲು ಅನುಭವಿಸಿದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ. ದಾಸಕರಿಯಪ್ಪ ನಿವಾಸಕ್ಕೆ ಮಂಗಳವಾರ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ನೀಡಿ, ಶ್ರೀನಿವಾಸ ಮತ್ತು ಕುಟುಂಬ ವರ್ಗಕ್ಕೆ ಧೈರ್ಯ ತುಂಬಿದರು.

ನಗರದಲ್ಲಿ ಶ್ರೀನಿವಾಸ ದಾಸಕರಿಯಪ್ಪ ನಿವಾಸಕ್ಕೆ ಸಂಜೆ ಭೇಟಿ ನೀಡಿದ ಬಿ.ವೈ.ವಿಜಯೇಂದ್ರ, ಪಕ್ಷದ ಪರಾಜಿತ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಭುಜವನ್ನು ತಟ್ಟಿ, ಧೈರ್ಯ ತುಂಬಿದರು. ಕುಟುಂಬದ ಸದಸ್ಯರೆಲ್ಲರಿಗೂ ಧೈರ್ಯ ತುಂಬಿ, ಶ್ರೀನಿವಾಸಗೆ ರಾಜಕೀಯದಲ್ಲಿ ಮುಂದೆ ಉಜ್ವಲ ಭವಿಷ್ಯವಿದೆಯೆಂದು ಆತ್ಮವಿಶ್ವಾಸ ಮೂಡಿಸಿದರು.



ಚುನಾವಣೆಯಲ್ಲಿ ಸೋಲು-ಗೆಲುವು ಸಾಮಾನ್ಯ ಆಗಿರುತ್ತದೆ. ಕಡಿಮೆ ಅಂತರದಲ್ಲಿ ಸೋಲನುಭವಿಸಿದ್ದು, ನಮ್ಮ ನಿರೀಕ್ಷೆಯಂತೆ ಕನಿಷ್ಠ 70 ಸಾವಿರ ಮತಗಳಾಗಿತ್ತು. ಆದರೆ, ಸುಮಾರು 63870 ಮತ ಪಡೆದಿದ್ದಾರೆ. ಈ ಸೋಲಿನಿಂದ ಎದೆಗುಂದಬೇಡಿ. ಪಕ್ಷ ಹಾಗೂ ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ. ಎಲ್ಲವನ್ನೂ ಮರೆತು, ಮತ್ತೆ ಪಕ್ಷ ಸಂಘಟನೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಕೊಳ್ಳಿ ಎಂದರು.

ಹಣ, ಹೆಂಡ, ಸೀರೆ ಹಂಚಿ ಗೆದ್ದ ಕಾಂಗ್ರೆಸ್

ಸ್ಟ್ರಾಂಗ್ ರೂಂ ಪ್ರಕರಣ ಬಗ್ಗೆ ಆಯೋಗಕ್ಕೆ ದೂರು ನೀಡುತ್ತೇವೆ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ನಿಜಕ್ಕೂ ನಾವು ಈ ಸಲ ಅತಿ ಹೆಚ್ಚು ಪ್ರಯತ್ನ ಮಾಡಿದ್ದೆವು. ಆದರೆ, ಹಣ, ಹೆಂಡದ ಜೊತೆಗೆ ಸೀರೆ ಹಂಚಿ ಕಾಂಗ್ರೆಸ್ ಗೆದ್ದಿದೆ ಎಂದು ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ. ದಾಸಕರಿಯಪ್ಪ ಆರೋಪಿಸಿದ್ದಾರೆ.



ನಗರದ ತಮ್ಮ ನಿವಾಸದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಗೆ ಬರಬೇಕಾಗಿದ್ದ ಮತಗಳೆಲ್ಲವೂ ಬಂದಿವೆ. ಆದರೆ, ಕಾಂಗ್ರೆಸ್ ಮೇಲೆ ಆಕ್ರೋಶಗೊಂಡಿದ್ದ ಮುಸ್ಲಿಂ ಸಮಾಜದಲ್ಲಿ ಕಡೆಗೂ 28 ಸಾವಿರ ಜನ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ ಎಂದರು.

ಮುಸ್ಲಿಂ ಸಮುದಾಯ ಶಾಮನೂರು ಕುಟುಂಬದ ಎದುರು ಹೋರಾಟವನ್ನೇ ಮಾಡಲಿಲ್ಲ. ಇದೇ ಕಾರಣಕ್ಕೆ ದಕ್ಷಿಣದಲ್ಲಿ ನಮಗೆ ಸೋಲಾಯಿತು. ಕ್ಷೇತ್ರದ ಮತ ಎಣಿಕೆಗೆ ಮುನ್ನ ಸ್ಟ್ರಾಂಗ್ ರೂಂ ಬೀಗ ತೆಗೆಯುವ ಬದಲಿಗೆ, ಅದರ ಚಿಲಕಗಳನ್ನೇ ಒಡೆದು ಹಾಕಿದ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡುತ್ತೇವೆ ಎಂದು ತಿಳಿಸಿದರು.

ದೇಶದ ವಿವಿಧೆಡೆ ಪಂಚ ರಾಜ್ಯಗಳ ಚುನಾವಣೆ ನಡೆದಿದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ನಡೆದಿದೆ. ಬಾಗಲಕೋಟೆ, ಪಂಚ ರಾಜ್ಯಗಳಲ್ಲಿ ಮಾಯವಾಗದ ಸ್ಟ್ರಾಂಗ್ ರೂಂ ಬೀಗ ದಾವಣಗೆರೆ ದಕ್ಷಿಣ ಕ್ಷೇತ್ರದ ಸ್ಟ್ರಾಂಗ್ ರೂಂನದ್ದೇ ಯಾಕೆ ಮಾಯವಾಯಿತು ಎಂದು ಅವರು ಪ್ರಶ್ನಿಸಿದರು.

ಚುನಾವಣಾ ಆಯೋಗಕ್ಕೆ ಈ ಬಗ್ಗೆ ದೂರು ನೀಡಲಾಗುವುದು. ಆಗಿರುವ ತಪ್ಪು, ಪ್ರಮಾದಕ್ಕೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ತನಿಖೆ ನಡೆಸಿ, ಕಾನೂನು ಕ್ರಮಕ್ಕೈಗೊಳ್ಳಬೇಕು. ಅಂತಹ ಅಧಿಕಾರಿಗಳನ್ನು ಸರ್ಕಾರಿ ಸೇವೆಯಿಂದಲೇ ವಜಾ ಮಾಡಬೇಕು. ಈ ಬಗ್ಗೆಯೂ ಚುನಾವಣಾ ಆಯೋಗಕ್ಕೆ ನೀಡುವ ದೂರಿನಲ್ಲಿ ಒತ್ತಾಯಿಸುತ್ತೇವೆ ಎಂದು ಶ್ರೀನಿವಾಸ ದಾಸಕರಿಯಪ್ಪ ಪುನರುಚ್ಚರಿಸಿದರು.

ಸುದ್ದಿ ಸಿಂಚನ

8ಕ್ಕೆ ಎಆರ್‌ಜಿ ವೈಭವ, ಸಾಂಸ್ಕೃತಿಕ ಉತ್ಸವ

ದಾವಣಗೆರೆ: ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜು, ಸ್ನಾತಕೋತ್ತರ ಕೇಂದ್ರದ 2025-26ನೇ ಸಾಲಿನ ಸಾಂಸ್ಕೃತಿಕ ವೇದಿಕೆ, ಎನ್ನೆಸ್ಸೆಸ್, ಎನ್‌ಸಿಸಿ, ಯುವ ರೆಡ್ ಕ್ರಾಸ್, ರೇಂಜರ್‌ಅಂಡ್ ರೋವರ್, ಕ್ರೀಡಾ ವಿಭಾಗ, ವಿದ್ಯಾರ್ಥಿ ಸಂಘ, ಹಿರಿಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಎಆರ್‌ಜಿ ವೈಭವ-2026 ಅನ್ನು ಮೇ 8 ರಂದು ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11.30ಕ್ಕೆ ಕಾಲೇಜಿನ ಪ್ರಾಚಾರ್ಯ ಡಾ. ಜಿ.ಬಿ.ಬೋರಯ್ಯ ಅಧ್ಯಕ್ಷತೆಯಲ್ಲಿ ದಕ್ಷಿಣ ಕ್ಷೇತ್ರದ ಶಾಸಕ ಸಮರ್ಥ ಶಾಮನೂರು ಕಾರ್ಯಕ್ರಮ ಉದ್ಘಾಟಿಸುವರು. ಅಖಿಲ ಕರ್ನಾಟಕ ವಿವಿ ಮತ್ತು ಕಾಲೇಜು ಅಧ್ಯಾಪಕರುಗಳ ಒಕ್ಕೂಟದ ಮಾಜಿ ಅಧ್ಯಕ್ಷ ಡಾ. ಸಿ. ಎಚ್. ಮುರಿಗೇಂದ್ರಪ್ಪ, ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಎಚ್.ಎಸ್. ಮಂಜುನಾಥ ಕುರ್ಕಿ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎ.ಜಿ. ಮಂಜುನಾಥ, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಸ್.ಬಿ. ನಾಗರಾಜ, ಕಾರ್ಯದರ್ಶಿ ಜಿ.ಓ.ದೇವೇಂದ್ರಪ್ಪ, ಎಆರ್‌ಜಿ ಪಪೂ ಕಾಲೇಜು ಪ್ರಾಚಾರ್ಯ ಕೆ.ಬೊಮ್ಮಣ್ಣ, ಪಿ.ರಶ್ಮಿ, ಡಾ. ಎಚ್.ಆರ್. ತಿಪ್ಪೇಸ್ವಾಮಿ, ವಿ.ಅಪ್ಪುಕುಮಾರ ಇತರರು ಭಾಗವಹಿಸುವರು.

ಇಂದು ಉಪನ್ಯಾಸ

ದಾವಣಗೆರೆ: ಇಲ್ಲಿನ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಐಕ್ಯೂಎಸಿ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ ಮೂಲಭೂತ ಕಾನೂನು ಪರಿಕಲ್ಪನೆಗಳು ಮತ್ತು ಕಾನೂನು ವೃತ್ತಿ-ಅದರ ಅಭ್ಯಾಸ ಮತ್ತು ಸವಾಲುಗಳು'''' ವಿಷಯದ ಕುರಿತು ಮೇ 6ರಂದು ಕಾಲೇಜಿನ ಆವರಣದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ. ಬೆಳಗ್ಗೆ 10.30ಕ್ಕೆ ಕರ್ನಾಟಕ ಸರ್ಕಾರದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಹಾಗೂ ಹಿರಿಯ ನ್ಯಾಯವಾದಿ ರೂಬೆನ್ ಜಾಕೋಬ್ ಕಾರ್ಯಕ್ರಮ ಉದ್ಘಾಟಿಸಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಕಾಲೇಜಿನ ನಿರ್ದೇಶಕ ಡಾ. ಎಂ. ಸೋಮಶೇಖರಪ್ಪ, ಕಾಲೇಜಿನ ಪ್ರಾಚಾರ್ಯ ಬಿ.ಪಿ. ಬಸವನಗೌಡ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ಐಕ್ಯೂಎಸಿ ಸಂಯೋಜಕ ಕೆ.ಎನ್.ಪ್ರದೀಪ್, ಕಾರ್ಯಕ್ರಮದ ಸಂಯೋಜಕ ವಿದ್ಯಾಧರ ಟಿ. ವೇದವರ್ಮ, ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಪಾಲಾಕ್ಷಪ್ಪ ನಿಧನ

ಮಲೇಬೆನ್ನೂರು: ಇಲ್ಲಿಗೆ ಸಮೀಪದ ಬೆಳ್ಳೂಡಿ ಗ್ರಾಮದ ಪ್ರಗತಿಪರ ರೈತ ಜಿ.ಎಂ. ಪಾಲಾಕ್ಷಪ್ಪ (71) ಸೋಮವಾರ ರಾತ್ರಿ ಅನಾರೋಗ್ಯದಿಂದಾಗಿ ನಿಧನರಾದರು. ಅವರಿಗೆ ಪತ್ನಿ, ಮಕ್ಕಳು ಹಾಗೂ ಬಂಧುಗಳಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸಂಜೆ ನೆರವೇರಿತು.



ಪಂಚಮಸಾಲಿ ಸಮಾಜದ ಸಂಕಲ್ಪ ಈಡೇರಿಸದ ಟ್ರಸ್ಟ್

ಕಪ್ಪುಹಣ ಬಿಳಿಯಾಗಿಸಲು ಪೀಠ, ಟ್ರಸ್ಟ್ ಬಳಕೆ: ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಆರೋಪ | ಪಂಚಮಸಾಲಿ ಸಮಾಜದವರ ಸಭೆ

• **ಕನ್ನಡಪ್ರಭ ವಾರ್ತೆ** ಹರಿಹರ

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ಸಂಕಲ್ಪಿಸಿದ್ದ ಸಂಕಲ್ಪವನ್ನು ಇಲ್ಲಿಯವರೆಗೂ ಈಡೇರಿಸುವಲ್ಲಿ, ಟ್ರಸ್ಟ್ ಸಂಪೂರ್ಣ ವಿಫಲವಾಗಿದೆ ಎಂದು ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಗಂಭೀರವಾಗಿ ಆರೋಪಿಸಿದರು.

ನಗರದ ಹೊರಭಾಗದ ಶಿವಮೊಗ್ಗ-ಹೊಸಪೇಟೆ ರಾಜ್ಯ ಹೆದ್ದಾರಿ ಪಕ್ಕದಲ್ಲಿರುವ ಅಯೋಧ್ಯ ಹೋಟೆಲ್ ಸಭಾ ಭವನದಲ್ಲಿ, ವೀರಶೈವ ಲಿಂಗಾಯತ ಪಂಚಮಸಾಲಿ ಶ್ರೀಪೀಠ, ಲೆಕ್ಕಕೊಡಿ ಚಳವಳಿ ಹೋರಾಟ ಸಮಿತಿ ಹಾಗೂ ರಾಜ್ಯ ಪಂಚಮಸಾಲಿ ಸಮಾಜ ಬಾಂಧವರ ಸಭೆಯಲ್ಲಿ ಅವರು ಮಾತನಾಡಿದರು. 2008 ರಲ್ಲಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಪಂಚಮಸಾಲಿ ಪೀಠದ ಹೆಸರಿನಲ್ಲಿ ನೋಂದಣಿ ಹೊಂದಿರುವ ಟ್ರಸ್ಟ್‌ನ ಟ್ರಸ್ಟಿಗಳು ಸರ್ಕಾರದ ಕಣ್ಣಿಗೆ ಮಣ್ಣೆರಚಿ ತಮ್ಮ ವ್ಯಾಪಾರದ ಕಪ್ಪುಹಣ ಬಿಳಿಯಾಗಿಸಿಕೊಳ್ಳಲು ಪೀಠ ಮತ್ತು ಟ್ರಸ್ಟ್ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಕಟ್ಟಡಗಳನ್ನು ಕಟ್ಟುವುದರಿಂದ ಪಂಚಮಸಾಲಿ ಸಮಾಜ ಅಭಿವೃದ್ಧಿ ಹೊಂದುವುದಿಲ್ಲ. ಸಂಘಟಿತಗೊಂಡ ಸಮಾಜದಿಂದ ಮೊದಲು ಪೀಠ, ನಂತರ ಮಠ ಸ್ಥಾಪನೆಗೊಂಡಿತು. ಆನಂತರ ಸಮಾಜ ಬಾಂಧವರಿಂದ, ದಾನಿಗಳಿಂದ, ಸರ್ಕಾರದಿಂದ ಬರುವ ಹಣದಿಂದ ಸಮಾಜ ಕಟ್ಟುವ ಬದಲು, ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಹುಟ್ಟಿಕೊಂಡಿರುವ ಟ್ರಸ್ಟ್ ಪದಾಧಿಕಾರಿಗಳು 18 ವರ್ಷಗಳಲ್ಲಿ ಸಮಾಜದ ನೌಕರರಿಂದ, ರೈತರಿಂದ, ಕಟ್ಟಕಡೆಯ ವ್ಯಕ್ತಿಗಳಿಂದ, ಉದ್ಯಮಿಗಳಿಂದ, ದಾನಿಗಳಿಂದ, ರಾಜಕೀಯ ಮುಖಂಡರಿಂದ ಹಾಗೂ ಸರ್ಕಾರದಿಂದ ಬಂದ ಒಟ್ಟು ಅಂದಾಜು ₹70 ಕೋಟಿಗೂ ಅಧಿಕ ಹಣ ಪೀಠದ ಟ್ರಸ್ಟಿಗಳು ಬಳಸಿದ್ದು ಲೆಕ್ಕ ನೀಡುವಲ್ಲಿ, ಭಾರಿ ಅವ್ಯವಹಾರ ನಡೆಸಿದ್ದಾರೆಂದರು.



ಪಂಚಮಸಾಲಿ ಸಮಾಜದ ಸಭೆಯಲ್ಲಿ ಸಮಾಜದ ನೂತನ ರಾಜ್ಯ ಪ್ರಧಾನ ಕಾರ್ಯದರ್ಶಿ ಶಂಕರ್‌ಗೌಡ ಚನ್ನಬಸಪ್ಪಗೌಡ ಪಾಟೀಲ್ ಅವರನ್ನು ಸನ್ಮಾನಿಸಲಸಯಿತು.

ಬಾವಿ ಬೆಟ್ಟಪ್ಪನವರೇ ಬಹಿರಂಗಪಡಿಸಿದ್ದರ ಫಲವಾಗಿ ಲೆಕ್ಕಕೊಡಿ ಚಳವಳಿ ಹುಟ್ಟಿಕೊಂಡಿದೆ. ಅದರಂತೆಯೇ ಲೆಕ್ಕ ಕೊಡಿ ಚಳವಳಿಯ ಕಾವು ಹೆಚ್ಚಾದ ಕಾರಣ ಏ.27ರಂದು ನೀಡಿದ ₹27.5 ಕೋಟಿ ಲೆಕ್ಕ ಶುದ್ಧ ಸುಳ್ಳು ಲೆಕ್ಕವಾಗಿದೆ. ಟ್ರಸ್ಟಿಗಳನ್ನು ನಂಬಿ ಹಣ ನೀಡಿ ಮೋಸಕ್ಕೆ ಒಳಗಾದ ಮುಖಂಡರು ಜನತೆ ಒತ್ತಾಯದ ಮೇರೆಗೆ, ಸಮಾಜದ ಸ್ವಾಸ್ಥ್ಯ ಕಾಪಾಡುವುದಕ್ಕಾಗಿ, ಪೀಠದಲ್ಲಿ ನಡೆಯುತ್ತಿರುವ ಎಲ್ಲ ಅವ್ಯವಹಾರಗಳನ್ನು ಬಯಲಿಗೆ ಎಳೆಯಲು ಬಂದಿದ್ದೇನೆ ಎಂದರು.

ಮನಗೂಳಿ ಮಠದ ಶ್ರೀಗಳಿಗೆ ಬುದ್ಧಿ ಇಲ್ಲ. ಹರಿಹರ ಪೀಠಕ್ಕೆ ಬರುವ ಯೋಚನೆಯಿದ್ದರೆ ಬಿಟ್ಟುಬಿಡಿ. ನಿಮ್ಮ ಹಿನ್ನೆಲೆ ನನಗೆ ಗೊತ್ತಿದೆ. ಬಿ.ಸಿ. ಉಮಾಪತಿ ಅವರಿಗೆ ಸತ್ಯದ ಲೆಕ್ಕವನ್ನು ನೀಡಲು ಮುಂದಾಗಿ. ನೀವು ಸತ್ಯದ ಲೆಕ್ಕವನ್ನು ನೀಡಿದ್ದೀರಿ ಎಂದಾದರೆ ಧರ್ಮಸ್ಥಳಕ್ಕಾಗಲಿ, ಕೊಟ್ಟೂರೇಶ್ವರನ ಸನ್ನಿಧಿಗಾಗಲಿ ಬಂದು ಆಣೆ ಪ್ರಮಾಣ ಮಾಡಿ. ಆಗ ಲೆಕ್ಕ ಕೊಡಿ ಚಳವಳಿ ಕೈ ಬಿಡುತ್ತೇವೆ ಎಂದು ಎಚ್.ಎಸ್ ಶಿವಶಂಕರ್‌ಹೇಳಿದರು.

ಸಭೆ ಅಧ್ಯಕ್ಷತೆ ವಹಿಸಿದ್ದ ಲೆಕ್ಕ ಕೊಡಿ ಚಳವಳಿ ಹೋರಾಟ ಸಮಿತಿ ಅಧ್ಯಕ್ಷ ಎಂ.ಜಿ. ಪರಮೇಶ್ವರ ಗೌಡ್ರ ಮಾತನಾಡಿ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕವಾಗಿ ಅಭಿವೃದ್ಧಿ ಹೊಂದಲು ಪಂಚಮಸಾಲಿ ಸಮಾಜವು ಸಂಘಟಿತಗೊಂಡಿದೆ. ಸಮಾಜದ ಹೆಸರಿನಲ್ಲಿ ಸ್ಥಾಪನೆಗೊಂಡ ಪೀಠದಲ್ಲಿ ನುಸುಳಿರುವ ವ್ಯಾಪಾರ ಸಂಸ್ಕೃತಿಯ ನಮ್ಮವರೇ ತಮ್ಮ ಸ್ವಾರ್ಥ ಸಾಧನೆ ಸ್ವಹಿತ ಚಿಂತನೆಯ ದೃಷ್ಟಿಯಿಂದ ನಮ್ಮ ನಮ್ಮೊಳಗೆ ವಿಷಬೀಜ ಬಿತ್ತಿ ಸಮಾಜ, ಸಂಘಟನೆ ಹಾಳು ಮಾಡುತ್ತಿದ್ದರೆ ಎಂದು ದೂರಿದರು.

ಸಭೆಯಲ್ಲಿ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಪಂಚಮಸಾಲಿ ಸಮಾಜದ ನೂತನ ರಾಜ್ಯ ಪ್ರಧಾನ ಕಾರ್ಯದರ್ಶಿ ಶಂಕರಗೌಡ ಪಾಟೀಲ, ಮಾಜಿ ಮೇಯರ್‌ಬಿ.ಜಿ. ಅಜಯ್‌ಕುಮಾರ್, ಡಾ.ಬಸವರಾಜ ವೀರಾಪುರ, ಎಂ.ಬಿ. ಬಸವರಾಜ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಆನಂದ ಎಂ.ಸಿ., ಆಡಳಿತಾಧಿಕಾರಿ ಡಾ. ಎಚ್.ಪಿ. ರಾಜಕುಮಾರ್, ಟ್ರಸ್ಟಿ ಹೊನ್ನಾಳಿ ಬಾಬಣ್ಣ, ಸಿದ್ದು ಚಿಕ್ಕಬಿದರಿ, ವೀರೇಶ ಮೂಟಗಿ, ಶಿವು ಗುಡ್ಡಾಪುರ, 31 ಜಿಲ್ಲೆಗಳ ಅನೇಕರು ಮಾತನಾಡಿದರು.

ಬಗರ್‌ಹುಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ ನೀಡಬೇಕು. ಕೂಡಲೇ ಸಮಿತಿ ರಚನೆ ಮಾಡಿ, ಅರ್ಹ ರೈತರಿಗೆ ಸಾಗುವಳಿ ಚೀಟಿ ಕೊಡಬೇಕು. ಫಸಲ್ ವಿಮಾ ಯೋಜನೆಯಡಿ ತಕ್ಷಣ ರೈತರ ಖಾತೆಗೆ ಹಣ ಜಮಾ ಮಾಡಬೇಕು. ದಾವಣಗೆರೆ ಜಿಲ್ಲೆಯ ಗ್ರಾಮೀಣ ಭಾಗದ ಕುಡಿಯುವ ನೀರಿನ ಸಮಸ್ಯೆ ಸಾಕಷ್ಟಿದ್ದು, ಕೂಡಲೇ ನೀರಿನ ಸಮಸ್ಯೆ ನಿವಾರಿಸಲು ಜಿಲ್ಲಾಧಿಕಾರಿ ಗಮನಹರಿಸಿ, ನೀರಿನ ಬವಣೆ ನೀಗಿಸಬೇಕು.

• **ಗುಮ್ಮನೂರು ಬಸವರಾಜ** ಜಿಲ್ಲಾಧ್ಯಕ್ಷ, ರಾಜ್ಯ ರೈತ ಸಂಘ-ಹಸಿರು ಸೇನೆ.

ಬೀಗ ಪ್ರಕರಣ ತನಿಖೆಗೆ ಶಿವಕುಮಾರಪ್ಪ ಒತ್ತಾಯ

ಸ್ಟ್ರಾಂಗ್ ರೂಂ ಬೀಗ ತೆಗೆಯದೇ, ಚಿಲಕ ಒಡೆದ ಗಂಭೀರ ಪ್ರಮಾದಕ್ಕೆ ಆಮ್ ಆದ್ಮಿ ಆಕ್ರೋಶ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಮತ ಎಣಿಕೆಗೆ ಮುನ್ನ ಸ್ಟ್ರಾಂಗ್ ರೂಂ ಬಾಗಿಲು ತೆರೆಯುವಲ್ಲಿ ಆಗಿರುವ ಲೋಪದೋಷದ ಬಗ್ಗೆ ಕೇಂದ್ರ, ರಾಜ್ಯ ಚುನಾವಣಾ ಆಯೋಗಗಳು ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಮ್ ಆದ್ಮಿ ಪಾರ್ಟಿ ಜಿಲ್ಲಾ ಅಧ್ಯಕ್ಷ, ಪರಾಜಿತ ಅಭ್ಯರ್ಥಿ ಕೆ.ಎಸ್. ಶಿವಕುಮಾರಪ್ಪ ಒತ್ತಾಯಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತ ಎಣಿಕೆ ಕೇಂದ್ರದಲ್ಲಿ ಸಕಾಲಕ್ಕೆ ವಿದ್ಯುನ್ಮಾನ ಮತಯಂತ್ರಗಳಿದ್ದ ಸ್ಟ್ರಾಂಗ್ ರೂಂಗಳ ಬಾಗಿಲುಗಳಿಗೆ ಹಾಕಿದ್ದ ಬೀಗಗಳನ್ನು ಕೀಗಳಿಂದ ತೆಗೆದಿಲ್ಲ. ಬದಲಿಗೆ ಸುತ್ತಿಗೆಯಿಂದ ಚಿಲಕಗಳನ್ನು ಒಡೆದು, ರೂಂಗಳ ಬಾಗಿಲುಗಳನ್ನು ತೆರೆದಿರುವುದು ಮಹಾಲೋಪವಾಗಿದೆ. ಈ ವಿಚಾರವನ್ನು ಆಯೋಗಗಳು ಗಂಭೀರವಾಗಿ ಪರಿಗಣಿಸಲಿ ಎಂದರು.

ಸ್ಟ್ರಾಂಗ್ ರೂಂ ಬಾಗಿಲು ತೆರೆಯಲಾಗದ ಲೋಪದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಈ ಬಗ್ಗೆ ಸೋಮವಾರ ಸಂಜೆಯೇ ಇ-ಮೇಲ್ ಮೂಲಕ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇನೆ. ಆದರೂ, ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸೋಮವಾರ ಬೆಳಗ್ಗೆ 7 ಗಂಟೆಗೆ ಮತ ಎಣಿಕೆ ಕೇಂದ್ರಕ್ಕೆ ನಾವು ಹೋಗಿದ್ದೆವು. 8 ಗಂಟೆಯಾದರೂ ಸ್ಟ್ರಾಂಗ್‌ರೂಂಬಾಗಿಲುತೆರೆದಿರಲಿಲ್ಲ. ಯಾವಕಾರಣಕ್ಕೆಸ್ಟ್ರಾಂಗ್‌ರೂಂ ಬಾಗಿಲುತೆರೆಯುತ್ತಿಲ್ಲವೆಂದುಚುನಾವಣಾಧಿಕಾರಿಗೆಕೇಳಿದರೆಬೀಗದ ಸಂಖ್ಯೆ ವ್ಯತ್ಯಾಸವಾಗಿದೆ. ಹಾಗಾಗಿ, ಸುತ್ತಿಗೆಯಿಂದ ಚಿಲಕ ಒಡೆದು, ಬಾಗಿಲು ತೆರೆಯುವುದಾಗಿ ಹೇಳಿದರು ಎಂದು ದೂರಿದರು.

ಮತ ಎಣಿಕೆ ವೇಳೆ ಇಂತಹ ಘಟನೆ ಆಗಿದ್ದನ್ನು ಗಮನಿಸಿದರೆ ಸಂಶಯ, ಅನುಮಾನ ಬರುತ್ತಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ, ಗಂಭೀರ ಲೋಪಕ್ಕೆ ಯಾರು ಹೊಣೆ? ಸ್ಟ್ರಾಂಗ್ ರೂಂ ತೆರೆಯುವಲ್ಲಿ ಆದ ಲೋಪದ ಬಗ್ಗೆ ಚುನಾವಣಾ ಆಯೋಗ ತನಿಖೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಕಾನೂನಾತ್ಮಕ ಹೋರಾಟ ನಡೆಸಲಿದ್ದೇವೆ. ಜನರ ಮುಂದೆ ಈ ಎಲ್ಲ ವಿಷಯ ತಿಳಿಸಲಾಗುವುದು. ಮತ ಎಣಿಕೆ ಅಂತಿಮ ಸುತ್ತಿನ ವೇಳೆಯೂ 3 ವಿದ್ಯುನ್ಮಾನ ಮತಯಂತ್ರ ಓಪನ್ ಆಗದ ಬಗ್ಗೆಯೂ ಅನುಮಾನವಿದೆ ಎಂದರು.

ಅಲ್ಲದೇ, ಸ್ಟ್ರಾಂಗ್ ರೂಂ ತೆರೆಯಲು ವಿಳಂಬವಾದಾಗಲೇ ಫಲಿತಾಂಶವನ್ನು ಪ್ರಕಟಿಸದಂತೆ ತಡೆ ಕೋರಿ ಲಿಖಿತ ಅರ್ಜಿ ಸಲ್ಲಿಸಬೇಕಾಗಿತ್ತು. ಆದರೆ, ಹಾಗೆ ಮಾಡಲಿಲ್ಲ. ಕಾನೂನು ರೀತಿ ಹೋರಾಟನಡೆಸಲಿದ್ದೇವೆ. ಸ್ಟ್ರಾಂಗ್‌ರೂಂಗಳಚಿಲಕಗಳಸುತ್ತಿಗೆಯಿಂದ ಹೊಡೆದು ಬಾಗಿಲು ತೆಗೆದಿದ್ದು ಸರಿಯಾದ ಕ್ರಮವಲ್ಲ. ಈ ಬಗ್ಗೆ ಚುನಾವಣಾಧಿಕಾರಿ ಸಂತೋಷಕುಮಾರ ಅವರನ್ನು ಪ್ರಶ್ನಿಸಿದರೆ ಹಾರಿಕೆ ಉತ್ತರ ನೀಡಿದರು. ಸ್ಟ್ರಾಂಗ್ ರೂಂ ಬೀಗದ ಕೀಲಿ ಕೈಗಳು ನಾಪತ್ತೆಯಾದ ಬಗ್ಗೆ ತನಿಖೆ ಆಗಬೇಕು ಎಂದು ಹೇಳಿದರು.

ಪಕ್ಷದ ಮುಖಂಡರಾದ ಎಸ್.ಕೆ. ಆದಿಲ್ ಖಾನ್, ಪ್ರೊ.ಧರ್ಮಾ ನಾಯ್ಕ, ಶಬ್ಬೀರ್‌ಅಹಮದ್, ಕೆ.ಪಿ.ವಿಕಾಸ್ ಇದ್ದರು.



ದಾವಣಗೆರೆಯಲ್ಲಿ ಮಂಗಳವಾರ ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ, ದಾವಣಗೆರೆ ದಕ್ಷಿಣ ಕ್ಷೇತ್ರದ ಪರಾಜಿತ ಅಭ್ಯರ್ಥಿ ಕೆ.ಎಸ್.ಶಿವಕುಮಾರಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಎಸ್.ಕೆ. ಆದಿಲ್ ಖಾನ್, ಪ್ರೊ.ಧರ್ಮಾ ನಾಯ್ಕ, ಶಬ್ಬೀರ್‌ಅಹಮದ್, ಕೆ.ಪಿ.ವಿಕಾಸ್ ಇದ್ದರು.

> **ದಾವಣಗೆರೆ ದಕ್ಷಿಣ ಕ್ಷೇತ್ರದ ಮತಯಂತ್ರಗಳ ಸುರಕ್ಷತೆ ಬಗ್ಗೆಯೇ ಸಂಶಯ ವ್ಯಕ್ತವಾಗುತ್ತಿದೆ. ಚುನಾವಣೆ ಪ್ರಕ್ರಿಯೆಯಲ್ಲಿ ಇಷ್ಟು ದೊಡ್ಡ ಲೋಪ, ಗಂಭೀರ ಪ್ರಮಾದ ಆಗಿರುವುದಕ್ಕೆ ಕ್ಷೇತ್ರದ ಚುನಾವಣಾಧಿಕಾರಿಯೇ ನೇರ ಹೊಣೆ ಹೊರಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮವಾಗಬೇಕು. ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ಈಗಾಗಲೇ ದೂರು ಸಲ್ಲಿಸಲಾಗಿದೆ. ಮುಂದೆ ಕಾನೂನು ಹೋರಾಟಕ್ಕೂ ಚಿಂತನೆ ನಡೆಸಿದ್ದೇವೆ.**
>
> • **ಕೆ.ಎಸ್.ಶಿವಕುಮಾರಪ್ಪ,** ಜಿಲ್ಲಾಧ್ಯಕ್ಷ, ಎಎಪಿ,ದಕ್ಷಿಣ ಕ್ಷೇತ್ರ ಪರಾಜಿತ ಅಭ್ಯರ್ಥಿ.

ವಚನಾನಂದ ಶ್ರೀಗೆ ನಿರೀಕ್ಷಣಾ ಜಾಮೀನು

ಹರಿಹರ: ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ಶ್ರೀ ವಚನಾನಂದ ಸ್ವಾಮೀಜಿ ಅವರಿಗೆ ಮಕ್ಕಳ ದುರ್ಬಳಕೆ ಹಾಗೂ ದೌರ್ಜನ್ಯದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.



ಮಠದ ಆಂತರಿಕ ವಿವಾದಗಳ ನಡುವೆಯೇ ಕೇಳಿಬಂದಿದ್ದ ಈ ಗಂಭೀರ ಆರೋಪದ ಹಿನ್ನೆಲೆಯಲ್ಲಿಶ್ರೀಗಳಪರವಾಗಿಏಪ್ರಿಲ್21ರಂದು ಜಿಲ್ಲಾನ್ಯಾಯಾಲಯದಲ್ಲಿಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 482ರ ಅಡಿಯಲ್ಲಿ ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ (ಕ್ರಿ.ಮಿ.ನಂ. 324/2026) ಸಲ್ಲಿಸಿ ದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯವು, ಸರ್ಕಾರಿ ಅಭಿಯೋಜಕರ ಆಕ್ಷೇಪಣೆ ಹಾಗೂ ಪ್ರತಿವಾದಗಳನ್ನು ಆಲಿಸಿದ ನಂತರ ಮೇ 2ರಂದು ಶ್ರೀಗಳಿಗೆ ಜಾಮೀನು ನೀಡಿ ಆದೇಶ ಹೊರಡಿಸಿದ್ದು, ಶ್ರೀಗಳಿಗೆ ತಾತ್ಕಾಲಿಕ ಸಮಾಧಾನ ಸಿಕ್ಕಂತಾಗಿದೆ.

ಸುಪ್ರೀಂಕೋರ್ಟ್‌ನನಿರ್ದೇಶನದಂತೆ, ಅಪ್ರಾಪ್ತಮಕ್ಕಳು ಮತ್ತು ಸಂವೇದನಾಶೀಲ ಪ್ರಕರಣಗಳಿಗೆ ಸಂಬಂಧಿಸಿದ ಆದೇಶದ ಪ್ರತಿಗಳನ್ನು ಸಾರ್ವಜನಿಕವಾಗಿ ಆನ್‌ಲೈನ್‌ನಲ್ಲಿ ಲಭ್ಯವಾಗದಂತೆ ಗೌಪ್ಯವಾಗಿಡಲಾಗಿದೆ.

ತನಿಖೆಗೆ ಸಂಪೂರ್ಣ ಸಹಕಾರ ನೀಡಬೇಕು. ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಮತ್ತು ನ್ಯಾಯಾಲಯದ ಅನುಮತಿಯಿಲ್ಲದೇ ವ್ಯಾಪ್ತಿ ಬಿಟ್ಟು ಹೋಗಬಾರದು ಎಂಬಂತಹ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಲಾಗಿದೆ ಎಂದು ತಿಳಿದುಬಂದಿದೆ.

ಪ್ರಕರಣದ ಹಿನ್ನೆಲೆ: ಏ.17ರಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಮಂಜುಳ ಮಹೇಶ್ ಹಾಗೂ ತಂಡವು ಹರಿಹರ ಮಠಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು. ಮಠದಲ್ಲಿದ್ದ ಮಕ್ಕಳು ಸ್ವಾಮೀಜಿ ಹೊಡೆಯುತ್ತಾರೆ, ಬೈಯುತ್ತಾರೆ ಹಾಗೂಹುಷಾರಿಲ್ಲದಿದ್ದಾಗಔಷಧಕೊಡುವುದಿಲ್ಲ ಎಂಬ ಆರೋಪಗಳನ್ನು ಸಮಿತಿಯ ಮುಂದೆ ಮಾಡಿದ್ದರು.

ಈ ಸಂಬಂಧ ಮಕ್ಕಳ ವಾಸದ ಕೊಠಡಿ, ಗುರು ನಿವಾಸ ಹಾಗೂ ಭೋಜನಾಲಯಗಳನ್ನು ಸಮಿತಿಯು ಪರಿಶೀಲಿಸಿ, ಮೇಲಧಿಕಾರಿಗಳಿಗೆ ವರದಿ ಸಲ್ಲಿಸಿತ್ತು. ಈ ಬೆಳವಣಿಗೆಯ ಬೆನ್ನಲ್ಲೇ ಶ್ರೀಗಳ ಬಂಧನದ ಭೀತಿ ಎದುರಾಗಿತ್ತು.

ಸದ್ಯ ಮಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದು, ಜಾಮೀನು ದೊರೆತಿರುವುದು ಶ್ರೀಗಳ ಬೆಂಬಲಿಗರಲ್ಲಿ ಸಮಾಧಾನ ತಂದಿದೆ. ಆದರೆ, ಲೆಕ್ಕಪತ್ರದ ವಿವಾದ ಹಾಗೂ ಮಠದ ಆಡಳಿತಾತ್ಮಕ ಸಂಘರ್ಷ ಇನ್ನೂ ಬೂದಿ ಮುಚ್ಚಿದ ಕೆಂಡದಂತೆಯೇ ಮುಂದುವರಿದಿದೆ.

ದಕ್ಷಿಣದಲ್ಲಿ ಸೋತರೂ ಜನಮನ ಗೆದ್ದಿದ್ದೇವೆ

ಸಿದ್ದರಾಮೋತ್ಸವವೇ ಬೇರೆ, ಬಿಎಸ್‌ವೈ ಅಭಿಮಾನೋತ್ಸವವೇ ಬೇರೆ: ರೇಣು

ದಾವಣಗೆರೆ: ದಾವಣಗೆರೆ ದಕ್ಷಿಣದಲ್ಲಿ ನಮ್ಮ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಗೆಲ್ಲಬೇಕೆಂದು ಹಗಲು-ರಾತ್ರಿ ಎನ್ನದೇ ನಾವೆಲ್ಲರೂ ಕೆಲಸ ಮಾಡಿದ್ದು, ನಾವು ಸೋಲುತ್ತೇವೆಂದು ಯಾವತ್ತೂ ಅಂದುಕೊಂಡಿರಲಿಲ್ಲ. ಆದರೆ, ಚುನಾವಣೆಯಲ್ಲಿನಾವುಸೋತರೂ, ಜನರಮನಸ್ಸಿನಲ್ಲಿಗೆದ್ದಿದ್ದೇವೆಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದ್ದಾರೆ.

ನಗರದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ನಿವಾಸದಲ್ಲಿಮಂಗಳವಾರಸುದ್ದಿಗೋಷ್ಠಿಯಲ್ಲಿಮಾತನಾಡಿದ ಅವರು, ಮುಸ್ಲಿಂ ಅಭ್ಯರ್ಥಿಗಳು ಹೆಚ್ಚು ಮತ ಪಡೆಯುತ್ತಾರೆಂದು ಕೊಂಡಿದ್ದೆವು. ಆದರೆ, ಮುಸ್ಲಿಂ ಅಭ್ಯರ್ಥಿಗಳು ಅಷ್ಟೊಂದು ಮತಗಳನ್ನು ಪಡೆಯಲಿಲ್ಲ ಎಂದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಸೋಲುವ ಭೀತಿ ಶುರುವಾಗಿದೆ. ಹಾಗಾಗಿಯೇ, ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸದೇ, ನಿರಂತರವಾಗಿಮುಂದೂಡುತ್ತಿದ್ದಾರೆ. ದಾವಣಗೆರೆದಕ್ಷಿಣದಲ್ಲಿ ನಾವು ಗೆಲ್ಲಬೇಕಿತ್ತು ಎಂಬುದಾಗಿ ಈಗ ಜನರೆ ಮಾತನಾಡುತ್ತಿದ್ದಾರೆ ಎಂದು ಅವರು ತಿಳಿಸಿದರು.

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪನವರು ರಾಜಕೀಯಕ್ಕೆ ಜೀವನಕ್ಕೆ 50 ವರ್ಷವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಯಡಿಯೂರಪ್ಪನವರ ಜೀವನಕ್ಕೆ ಗೌರವ ಸಲ್ಲಿಸುವ ಕೆಲಸವೇ ಚಿತ್ರದುರ್ಗದಲ್ಲಿ ಮೇ 9ರಂದು ನಡೆಯುವ ಬಿಎಸ್‌ವೈ ಅಭಿಮಾನೋತ್ಸವಾಗಿದೆ. ಇದು ಯಡಿಯೂರಪ್ಪನವರ ಕುಟುಂಬದ ಕಾರ್ಯಕ್ರಮವಲ್ಲ. ಇಡೀ ರಾಜ್ಯದ ಯಡಿಯೂರಪ್ಪನವರ ಅಭಿಮಾನಿಗಳ ಕಾರ್ಯಕ್ರಮ ಎಂದು ಅವರು ಹೇಳಿದರು.


ಶ್ರೀನಿವಾಸ ನಿವಾಸಕ್ಕೆ ಭೇಟಿ ನೀಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಇತರರು ಬೆಣ್ಣೆ ದೋಸೆ ಸವಿದರು.

ಚಿತ್ರದುರ್ಗದಬಿಎಸ್ವೈ ಅಭಿಮಾನೋತ್ಸವಕ್ಕೆಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವಾರು ನಾಯಕರು ಆಗಮಿಸಲಿದ್ದಾರೆ. ವಿವಿಧ ಮಠಾಧೀಶರು ಕಾರ್ಯಕ್ರಮದ ಸಾನಿಧ್ಯ ವಹಿಸುತವು. ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವವೇ ಬೇರೆ, ಚಿತ್ರದುರ್ಗದಲ್ಲಿ ನಡೆಯುವ ಬಿಎಸ್‌ವೈ ಅಭಿಮಾನೋತ್ಸವವೇ ಬೇರೆ ಎಂದು ರೇಣುಕಾಚಾರ್ಯ ಸ್ಪಷ್ಟಪಡಿಸಿದರು.

ಸಮರ್ಪಕ ಬೀಜ, ರಸಗೊಬ್ಬರ ಪೂರೈಸಿ

ರೈತರ ಮೇಲೆ ಲಾಠಿ ಬೀಸುವ ದುಸ್ಸಾಹಸ ಬೇಡ: ವಾಸುದೇವ ಮೇಟಿ ಎಚ್ಚರಿಕೆ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ನೀಡಲು ವಿಧಿಸಿರುವ ಎಫ್‌ಐಡಿ ತರುವ ಆದೇಶವನ್ನು ಕೈಬಿಡುವ ಜೊತೆಗೆ ಸಬ್ಸಿಡಿ ರೂಪದಲ್ಲಿಗುಣಮಟ್ಟದ ಬೀಜ, ರಸಗೊಬ್ಬರವನ್ನು ಸಕಾಲಕ್ಕೆ ರೈತರಿಗೆ ಪೂರೈಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ವಾಸುದೇವ ಮೇಟಿ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದಅವರು, ರಾಜ್ಯ ಸರ್ಕಾರರೈತರಿಗೆರಸಗೊಬ್ಬರಎಫ್‌ಐಡಿ ತರುವಂತೆಆದೇಶಿಸಿದೆ. ಈಕೂಡಲೇಎಫ್‌ಐಡಿರದ್ದುಪಡಿಸುವ ಜೊತೆಗೆ ಸಬ್ಸಿಡಿ ರೂಪದಲ್ಲಿ ಗುಣಮಟ್ಟದ ಬೀಜ ಮತ್ತು ರಸಗೊಬ್ಬರವನ್ನು ಸಕಾಲದಲ್ಲಿ ಪೂರೈಸಲಿ ಎಂದರು.

1 ಎಕರೆಗೆ1 ಕ್ವಿಂಟಲ್ ರಸಗೊಬ್ಬರನೀಡುವುದಾಗಿಹೇಳಿರುವುದು ಖಂಡನೀಯ. ದಾವಣಗೆರೆ ಜಿಲ್ಲೆಯಲ್ಲಿ 3.29 ಲಕ್ಷ ಹೆಕ್ಟೇರ್‌ಪ್ರದೇಶಕ್ಕೆ1,59,520 ಮೆಟ್ರಿಕ್ ಟನ್ ರಸಗೊಬ್ಬರದ ಅಗತ್ಯವಿದೆ. 1 ಎಕರೆಗೆ1 ಕ್ವಿಂಟಲ್ ಗೊಬ್ಬರ ನೀಡಿದರೆ ಎಲ್ಲಿಗೆ ಹಾಕಬೇಕು? ಇಷ್ಟು ಕಡಿಮೆ ಪ್ರಮಾಣದ ರಸಗೊಬ್ಬರ ಯಾವುದಕ್ಕೂ ಸಾಲದು. ಹಾಗಾಗಿ, ಸರ್ಕಾರ ಕೂಡಲೇ ಎಫ್ ಐಡಿ ಆದೇಶ ಕೈ ಬಿಡಬೇಕು ಎಂದು ಹೇಳಿದರು.

ಹಾವೇರಿಯಲ್ಲಿ ರಸಗೊಬ್ಬರಕ್ಕಾಗಿ ರೈತರು ಸರದಿಯಲ್ಲಿ ನಿಲ್ಲುತ್ತಿದ್ದಾರೆ. ರಸಗೊಬ್ಬರ ಪಡೆಯಲು ಬಂದ ರೈತರ ಮೇಲೆ ಲಾಠಿ ಬೀಸಲಾಗಿದೆ. ಎಲ್ಲಿಯಾದರೂ ರೈತರ ಮೇಲೆ ಲಾಠಿ ಬೀಸಿದರೆ ಮುಖ್ಯಮಂತ್ರಿ, ಸಚಿವರ ವಿರುದ್ಧ ಕಪ್ಪುಬಟ್ಟೆ ಪ್ರದರ್ಶನ, ಘೇರಾವ್, ವಿವಿಧ ರೀತಿಯ ಹೋರಾಟ ನಡೆಸಬೇಕಾದೀತು ಎಂದು ಅವರು ಎಚ್ಚರಿಸಿದರು.

ಸರ್ಕಾರ ರಸಗೊಬ್ಬರ ಪೂರೈಕೆ ಬದಲಿಗೆ ಕಳೆದ ವರ್ಷ ನ್ಯಾನೊ ಬಳಸುವಂತೆ ಹೇಳಿತ್ತು. ಅದರಿಂದ ರೈತರಿಗೆ ನಷ್ಟವಾಯಿತೇ ಹೊರತು, ಯಾವುದೇ ಅನುಕೂಲ ಆಗಲಿಲ್ಲ.



ಈಬಾರಿಅತಿಹೆಚ್ಚಿನಪ್ರಮಾಣದಲ್ಲಿಮೆಕ್ಕೆಜೋಳಬೆಳೆದಿದ್ದರೂ ಕ್ವಿಂಟಲ್‌ಗೆ ₹1700ರಿಂದ ₹1800 ದರ ಇದೆ. ರೈತರಿಗೆ ಇದರಿಂದಘೋರಅನ್ಯಾಯವಾಗುತ್ತಿದೆ. ಕಾಂಗ್ರೆಸ್‌ಸರ್ಕಾರ ರೈತರ ಪಾಲಿಗೆ ಅತ್ಯಂತ ಕಳಪೆ, ಅಯೋಗ್ಯ ಸರ್ಕಾರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ತಾನು ಅಧಿಕಾರಕ್ಕೆ ಬಂದ ತಕ್ಷಣ ರೈತರಿಗೆ ಮಾರಕವಾದ ಮೂರೂ ಕೃಷಿ ತಿದ್ದುಪಡಿ ಕಾಯ್ದೆ ರದ್ದುಪಡಿಸುವುದಾಗಿ ಹೇಳಿತ್ತು. ಈವರೆಗೂ ರದ್ದುಪಡಿಸಿಲ್ಲ. ನೀರಾವರಿ ಯೋಜನೆ ಬಗ್ಗೆ ಗಮನಹರಿಸುತ್ತಿಲ್ಲ. ಗ್ರಾಮೀಣ ಭಾಗದ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಕೃಷಿ ಪಂಪ್‌ಸೆಟ್‌ಗೆ ಡಿಜಿಟಲ್ ಮೀಟರ್ ಅಳವಡಿಕೆ, ಮೊಬೈಲ್ ಮಾದರಿಯಲ್ಲಿ ವಿದ್ಯುತ್ ರಿಚಾರ್ಜ್ ವ್ಯವಸ್ಥೆಗೆ ಮುಂದಾಗಿದೆ. ಒಟ್ಟಾರೆಯಾಗಿ ರೈತರಿಗೆ ಸರ್ಕಾರ ಮೋಸ ಮಾಡುತ್ತಿದೆ ಎಂದು ಆರೋಪಿಸಿದರು.

ಭರಮಸಮುದ್ರ ಕುಮಾರ ಮಾತನಾಡಿ, ದಾವಣಗೆರೆ ಜಿಲ್ಲಾಡಳಿತ ಕೂಡಲೇ ಬತ್ತ ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕು. ಇಲ್ಲವಾದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಬೀಗ ಹಾಕುವ ಮೂಲಕ ರೈತರು ಹಳೆಯ ಹೋರಾಟಕ್ಕೆ ಮರಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಂಘದ ಜಿಲ್ಲಾಧ್ಯಕ್ಷ ಗುಮ್ಮನೂರು ಬಸವರಾಜ, ಕೆಂಚಮ್ಮನಹಳ್ಳಿ ಹನುಮಂತಪ್ಪ, ಕಿತ್ತೂರು ಹನುಮಂತಪ್ಪ, ಸುನಿಲ್, ಕೋಲ್ಕುಂಟೆ ಉಚ್ಚೆಂಗೆಪ್ಪ, ಗುಂಡಪ್ಪ, ಭರತ್, ಏಕಾಂತಪ್ಪ, ಪಾಲಣ್ಣ, ಜಗದೀಶ, ಮಂಜುನಾಥ, ಮಲ್ಲಿಕಾರ್ಜುನ, ಮಧು ಇತರರು ಇದ್ದರು.